ದಾನ ಮಾಡಿರಿ, ಆದರೆ ಅದರಿಂದ ಪ್ರತಿಫಲ ನಿರೀಕ್ಷಿಸಬೇಡಿ. ಅದು ತಾನಾಗಿಯೇ ವಾಪಸ್ ಬರಲಿದೆ
-ಸ್ವಾಮಿ ವಿವೇಕಾನಂದ

# ಬೀದರವಾಣಿ

ಬೀದರ ಜಿಲ್ಲೆಯ ನಿರ್ಭಯ, ನಿಷ್ಪಕ್ಷಪಾತ ಏಕೈಕ ಅಂತರಜಾಲ(Online)

ಸಂಪಾದಕರು:ಸಿದ್ರಾಮಯ್ಯ ಸ್ವಾಮಿ

EDITOR:SIDRAMAYYA SWAMY

ಸೋತೆ ಎಂದು ನೀ ಮುಂದಿಟ್ಟ ಹೆಜ್ಜೆ ಹಿಂದಿಡಬೇಡ... ಏಕೆಂದರೆ... ಯಾರಿಗೆ ಗೊತ್ತು ಆ ಹೆಜ್ಜೆ ನಿನ್ನ ಇತಿಹಾಸವನ್ನೇ ಸೃಷ್ಟಿ ಮಾಡುವ ಹೆಜ್ಜೆಯಾಗಿರಬಹುದು...

bidarvani.com | ಇ-ಪೇಪರ್bidarvani.online | bidarvani | bidarvani@gmail.com | Whatsapp | Contact:9148471077

KARKAN/77693/2019 | ಸಂಪುಟ:08 | ಸಂಚಿಕೆ:205 | ದಿನಾಂಕ:14.11.2025 | ಶುಕ್ರವಾರ | ಪುಟ.4 | ಬೆಲೆ:02 ರೂ | ಮೊ.9945793175


## ವಲಸೆ ಕಾರ್ಮಿಕರ ಮಕ್ಕಳ ಶಿಕ್ಷಣಕ್ಕೆ ಕ್ರಮ ವಹಿಸಿ- ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ



ಬೀದರ.ನ.13:ಬೇರೆ ರಾಜ್ಯಗಳಿಂದ ವಲಸೆ ಬರುವ ಕಾರ್ಮಿಕರ ಮಕ್ಕಳ ಶಿಕ್ಷಣಕ್ಕೆ ಕ್ರಮ ವಹಿಸಿ ಎಂದು ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಅವರು ಗುರುವಾರ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ನಡೆದ ಬಾಲ್ಯವಿವಾಹ ತಡೆಗಟ್ಟುವ ಸಮನ್ವಯ ಮತ್ತು ಪರಿಶೀಲನೆ ಸಮಿತಿ ಮತ್ತು ಜಿಲ್ಲಾ ಮಕ್ಕಳ ಕಲ್ಯಾಣ ಮತ್ತು ರಕ್ಷಣಾ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಕಬ್ಬು ಕಟಾವು ಮಾಡಲು ಬೇರೆ ರಾಜ್ಯಗಳಿಂದ ಮತ್ತು ಜಿಲ್ಲೆಗಳಿಂದ ಕಾರ್ಮಿಕರು ತಮ್ಮ ಕುಟುಂಬದೊಂದಿಗೆ ಜಿಲ್ಲೆಗೆ ಬರುತ್ತಾರೆ. ಅವರ ಜೊತೆಗೆ ಮಕ್ಕಳು ಕೂಡ ಬರುವುದರಿಂದ ಅವರು ಶಿಕ್ಷಣದಿಂದ ವಂಚಿತರಾಗುತ್ತಿದ್ದಾರೆ. ಆದಕಾರಣ ಶಾಲಾ ಶಿಕ್ಷಣ ಇಲಾಖೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಮಕ್ಕಳ ಹಕ್ಕುಗಳ ರಕ್ಷಣಾ ಘಟಕ, ಕಾರ್ಮಿಕ ಇಲಾಖೆ, ಹತ್ತಿರದ ಗ್ರಾಮ ಪಂಚಾಯಿತ ಹಾಗೂ ಸಕ್ಕರೆ ಕಾರ್ಖಾನೆ ಮಾಲೀಕರು ಸಹಯೋಗದೊಂದಿಗೆ ಶಿಕ್ಷಣ ಮತ್ತು ಮೂಲಭೂತ ಸೌಕರ್ಯ ಒದಗಿಸುವ ಕಾರ್ಯ ಮಾಡಬೇಕು ಎಂದರು.

ಹೊರ ರಾಜ್ಯಗಳಿಂದ ಕಾರ್ಮಿಕರನ್ನು ಕರೆ ತರುವ ಗುತ್ತಿಗೆದಾರರು ಮತ್ತು ವಲಸೆ ಕಾರ್ಮಿಕರು ಕಡ್ಡಾಯವಾಗಿ ನೊಂದಣಿ ಆಗಬೇಕು. ಇದರಿಂದಾಗಿ ವಲಸೆ ಬರುವ ಕಾರ್ಮಿಕರಿಗೆ ಅಗತ್ಯವಿರುವ ಮೂಲಭೂತ ಸೌಕರ್ಯಗಳನ್ನು ಒದಗಿಸಬಹುದು ಮತ್ತು ಅವರ ಮಕ್ಕಳಿ ಅಂಗನವಾಡಿ ಕೇಂದ್ರ ಮತ್ತು ಹತ್ತಿರ ಶಾಲೆಗಳಲ್ಲಿ ಶಿಕ್ಷಣ ನೀಡುವ ವ್ಯವಸ್ಥೆ ಮಾಡಲಾಗುವುದು ಹಾಗೂ ಮಹಿಳಾ ಕಾರ್ಮಿಕರು ಕಾರ್ಯ ನಿರ್ವಹಿಸುತ್ತಿರುವ ಕಾರ್ಖಾನೆಗಳಲ್ಲಿ ಮಕ್ಕಳ ಆರೈಕೆ ಕೇಂದ್ರ ಸ್ಥಾಪಿಸಬೇಕು ಎಂದರು.ಬೀದರ ಜಿಲ್ಲೆಯನ್ನು ಬಾಲ್ಯವಿವಾಹ ಮುಕ್ತ ಜಿಲ್ಲೆಯಾಗಲು ಎಲ್ಲಾ ಇಲಾಖೆಗಳ ಸಹಭಾಗೀತ್ವ ಬಹಳ ಮುಖ್ಯವಾಗಿದೆ. ಇಲಾಖೆಯ ಅಧಿಕಾರಿಗಳು ಕೂಡ ಎಲ್ಲೆ ಬಾಲ್ಯವಿವಾಹ ಕಂಡು ಬಂದಲ್ಲಿ ತಕ್ಷಣ ಸಂಬಂಧಪಟ್ಟವರಿಗೆ ಮಾಹಿತಿ ನೀಡಿ, ಬಾಲ್ಯವಿವಾಹ ತಡೆಗಟ್ಟುವ ಕಾರ್ಯಗಳು ಮಾಡಬೇಕು ಎಂದರು.

ಜಿಲ್ಲೆಯ ಎಲ್ಲಾ ಜಿಲ್ಲಾ, ತಾಲ್ಲೂಕು, ಹೋಬಳಿ, ಗ್ರಾಮ ಪಂಚಾಯಿತಿ ಮತ್ತು ಗ್ರಾಮ ಮಟ್ಟದ ಸರ್ಕಾರಿ ಕಛೇರಿ, ಅರೆ ಸರ್ಕಾರಿ, ಶೈಕ್ಷಣಿಕ ಸಂಸ್ಥೆಗಳು, ಖಾಸಗಿ ಸ್ವಯಂ ಸೇವಾ ಸಂಸ್ಥೆಗಳು ಸೇರಿದಂತೆ ಎಲ್ಲಾ ಕಟ್ಟಡಗಳ ಮೇಲೆ ಮಕ್ಕಳ ಸಹಾಯವಾಣಿ 1098 ನಾಮ ಫಲಕ ಅಳವಡಿಕೆ ಕಡ್ಡಾಯವಾಗಿದ್ದು, ಈ ಬಗ್ಗೆ ಕ್ರಮ ವಹಿಸಲು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಈ ಸಂದರ್ಭದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ಶ್ರೀಧರ ಎಂ.ಎಸ್., ಗ್ರಾಮೀಣ ಶಿಕ್ಷಣ ಮತ್ತು ಆರೋಗ್ಯ ಸಂಸ್ಥೆ (ಆರ್‌ಎಲ್‌ಎಚ್‌ಪಿ) ಮೈಸೂರು ಹಾಗೂ ರಾಜ್ಯ ಸಂಚಾಲಕರು ಬಾಲ ಕಾರ್ಮಿಕ ಪದ್ಧತಿ ವಿರೋಧಿ ಆಂಧೋಲನ, ಕರ್ನಾಟಕ ನಿರ್ದೇಶಕರಾದ ಸರಸ್ವತಿ, ಬಾಲಕಾರ್ಮಿಕ ಪದ್ಧತಿ ವಿರೋಧಿ ಆಂದೋಲನ, ರಾಜ್ಯ ಸಂಯೋಜಕ ಸಂಪತ್ ಕಟ್ಟಿ, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ರೂಪಾ ಕೋಟೆಗೌಡರ, ಮಕ್ಕಳ ಕಲ್ಯಾಣ ಸಮಿತಿ ಅಧ್ಯಕ್ಷ ಸೀಮಪ್ಪಾ, ಮರಾಠವಾಡ ಗ್ರಾಮೀಣ ವಿಕಾಸ ಸಂಸ್ಥೆಯ ಯೋಜನಾ ವ್ಯವಸ್ಥಾಪಕ ಅಶ್ವಜಿತ್ ಜಾಧವ್, ಮೌಲ್ಯಮಾಪಕರು ಅನುಪ್ ಮೋರೆ, ಸೇರಿದಂತೆ ಇತರೆ ಅಧಿಕಾರಿಗಳು ಉಪಸ್ಥಿತರಿದ್ದರು.

## ಸಮಾವೇಶದ ಮೂಲಕ 120 ಜನರಿಗೆ ಮದುವೆ ಮಾಡಲಾಗಿದೆ-ಗೋವಿಂದರಾಜು

ಬೀದರ,ನ.13:ವಧು-ವರರ ಅನ್ವೇಷನಾ ಸಮಾವೇಶ (ಹೆಚ್.ಐ.ವಿ.ಸೊಂಕಿತರಿಗಾಗಿ) ಸುಮಾರು ವರ್ಷಗಳಿಂದ ಕರ್ನಾಟಕ ರಾಜ್ಯದಲ್ಲಿ ಹಮ್ಮಿಕೊಳ್ಳಲಾಗುತ್ತಿದ್ದು, 120 ಜನರಿಗೆ ಈ ಸಮಾವೇಶದ ಮೂಲಕ ಮದುವೆ ಮಾಡಲಾಗಿದೆ ಎಂದು ಕರ್ನಾಟಕ ರಾಜ್ಯ ಏಡ್ಸ್ ಪ್ರಿವೆಷನ್ ಸೊಸೈಟಿಯ ಉಪನಿರ್ದೇಶಕರಾದ ಗೋವಿಂದರಾಜು ಹೇಳಿದರು.

ಅವರು ಬುಧವಾರ ಬೀದರನ ಹೋಟೆಲ್ ದ ಕೃಷ್ಣ ರಿಜೆಯನ್ಸಿಯಲ್ಲಿ ಹಮ್ಮಿಕೊಂಡಿದ್ದ ವಧು-ವರರ ಅನ್ವೇಷನಾ ಸಮಾವೇಶ (ಹೆಚ್.ಐ.ವಿ ಸೋಂಕಿತರಿಗಾಗಿ) ಉದ್ಘಾಟಿಸಿ ಮಾತನಾಡಿದರು.ಮುಂಬರುವ ದಿನಗಳಲ್ಲಿ ಕರ್ನಾಟಕ ರಾಜ್ಯ ಏಡ್ಸ್ ಪ್ರಿವೆಷನ್ ಸೊಸೈಟಿ ಬೆಂಗಳೂರು ವತಿಯಿಂದ ಆನ್-ಲೈನ್ ಮೂಲಕ ಮೇಟ್ರಿಮೊನಿ ಸಾಮಾಜಿ ಜಾಲತಾಣವನ್ನು ಸಿದ್ದಪಡಿಸಲಾಗುತ್ತಿದೆ. ಅದರಲ್ಲಿ ಹೆಚ್.ಐ.ವಿ ಸೋಂಕಿತರು ನೋಂದಣಿ ಮಾಡಿಕೊಂಡು ತಮ್ಮ ಬಾಳಸಂಗಾತಿಯನ್ನು ಆಯ್ಕೆ ಮಾಡಿಕೊಳ್ಳಬೇಕೆಂದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಧ್ಯಾನೇಶ್ವರ ನಿರಗುಡೆ ಮಾತನಾಡಿ, ಬೀದರ ಜಿಲ್ಲೆಯಲ್ಲಿ ಹಮ್ಮಿಕೊಳ್ಳಲಾಗಿರುವ ಸಮಾವೇಶದ ಸದುಪಯೋಗವನ್ನು ಪಡೆದುಕೊಳ್ಳಬೇಕೆಂದು ಹೇಳಿದರು.

ಕರ್ನಾಟಕ ರಾಜ್ಯ ಏಡ್ಸ್ ಪ್ರಿವೆಷನ್ ಸೊಸೈಟಿಯ ಸಹಾಯಕ ನಿರ್ದೇಶಕರು (ಜೇಪಾ) ಶ್ರೀನಿವಾಸ. ಸಿ ಅವರು ಮಾತನಾಡಿ, ಸಮಾವೇಶದಲ್ಲಿ ವಧು ವರರು ತಮ್ಮ ಸಂಪೂರ್ಣ ಮಾಹಿತಿಯನ್ನು ಸರಿಯಾಗಿ ನೀಡಿ, ತಪ್ಪಾದ ಮಾಹಿತಿಯನ್ನು ನೀಡದೇ ಸಂಗಾತಿಯನ್ನು ಹುಡುಕಿಕೊಳ್ಳಿರಿ ಎಂದು ಹೇಳಿದರು.ಜಿಲ್ಲಾ ಏಡ್ಸ್ ನಿಯಂತ್ರಣಾಧಿಕಾರಿ ಡಾ. ಅನೀಲಕುಮಾರ ಚಿಂತಾಮಣಿ ಮಾತನಾಡಿ, ಹೆಚ್.ಐ.ವಿ ಸೋಂಕಿತರಿಗೆ ಸಮಾವೇಶವನ್ನು ಹಮ್ಮಿಕೊಳ್ಳುವ ಅವಶ್ಯಕತೆಯ ಮೂಲ ಉದ್ದೇಶದ ಕುರಿತು 2030 ರೊಳಗೆ ಹೆಚ್.ಐ.ವಿ/ಏಡ್ಸ್ ಹೊಸ ಸೋಂಕನ್ನು ಸೊನ್ನೆಗೆ ತರಲು ಹಲವಾರು ಕಾರ್ಯಕ್ರಮ ಜಿಲ್ಲೆಯಲ್ಲಿ ಹಮ್ಮಿಕೊಳ್ಳುತ್ತಿದ್ದೇವೆ. ಈ ಕಾರ್ಯಕ್ರಮದ ಸದುಪಯೋಗ ಪಡೆದುಕೊಳ್ಳಬೇಕೆಂದು ತಿಳಿಸಿದರು.



## ನಮ್ಮ ಕರ್ನಾಟಕ ಸೇನೆಯಿಂದ ವಿಭಾಗೀಯ ನಿಯಂತ್ರಣಾಧಿಕಾರಿಗೆ ಮನವಿ ಪತ್ರ

## ಬೀದರ್- ಜ್ಯಾಂತಿ ಹೊಸ ಬಸ್ ಓಡಿಸಲು ಆಗ್ರಹ



ಬೀದರ್.ನ13:ಬೀದರ್‌ನಿಂದ ಬ್ಯಾಲಹಳ್ಳಿ, ಕಣಜಿ ಮಾರ್ಗವಾಗಿ ಜ್ಯಾಂತಿಗೆ ಹೊಸ ಬಸ್ ಓಡಿಸಬೇಕು ಎಂದು ನಮ್ಮ ಕರ್ನಾಟಕ ಸೇನೆ ಆಗ್ರಹಿಸಿದೆ.

ಸೇನೆಯ ಜಿಲ್ಲಾ ಘಟಕದ ಪದಾಧಿಕಾರಿಗಳು ನಗರದಲ್ಲಿ ಗುರುವಾರ ನಿಯೋಗದಲ್ಲಿ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ವಿಭಾಗೀಯ ನಿಯಂತ್ರಣಾಧಿಕಾರಿ ಅವರಿಗೆ ಈ ಕುರಿತು ಮನವಿ ಪತ್ರ ಸಲ್ಲಿಸಿದರು.

ಹೊಸ ಬಸ್ ಅನ್ನು ಹಲಬರ್ಗಾ, ಪುನಃ ಜ್ಯಾಂತಿ, ಕಣಜಿ,ಬ್ಯಾಲಹಳ್ಳಿ ಮಾರ್ಗವಾಗಿ ಬೀದರ್‌ಗೆ ಓಡಿಸಬೇಕು ಎಂದು ಸೇನೆಯ ಜಿಲ್ಲಾ ಘಟಕದ ಅಧ್ಯಕ್ಷ ಗಣೇಶ ಪಾಟೀಲ ಜ್ಯಾಂತಿ ಬೇಡಿಕೆ ಮಂಡಿಸಿದರು.

ಕಣಜಿ, ಬ್ಯಾಲಹಳ್ಳಿ, ಹಾಲಹಳ್ಳಿ ಹಾಗೂ ಬೀದರ್‌ನಿಂದ ಬ್ಯಾಲಹಳ್ಳಿಗೆ ಹೆಚ್ಚಿನ ಸಂಖ್ಯೆಯಲ್ಲಿ ತಡೆ ರಹಿತ ಬಸ್‌ಗಳು ಇವೆ. ಇದರಿಂದಾಗಿ ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ತೊಂದರೆ ಅನುಭವಿಸುವಂತಾಗಿದೆ ಎಂದು ಗಮನ ಸೆಳೆದರು.

ಭಾಲ್ಕಿ ತಾಲ್ಲೂಕಿನ ಹುಣಜಿ(ಎ) ಸಮೀಪದ ಮಹಾತ್ಮ ಗಾಂಧಿ ಸಹಕಾರ ಸಕ್ಕರೆ ಮುಂಭಾಗದ ರಸ್ತೆ ಮೂಲಕವೇ ಹಿಂದೆ ಎಲ್ಲ ಬಸ್‌ಗಳು ಸಂಚರಿಸುತ್ತಿದ್ದವು. ಇದೀಗ ಮೇಲ್ಸೆತುವೆ ಮೂಲಕ ಸಂಚರಿಸುತ್ತಿರುವುದರಿಂದ ಕಾರ್ಖಾನೆಯಲ್ಲಿ ಕೆಲಸ ನಿರ್ವಹಿಸುವ ಸುಮಾರು 1,200 ನೌಕರರು, ಕಾರ್ಮಿಕರಿಗೆ ಸಮಸ್ಯೆಯಾಗುತ್ತಿದೆ ಎಂದು ಹೇಳಿದರು.

ಈ ಹಿಂದೆ ಕಾರ್ಮಿಕರಿಗೆ ಆಗುತ್ತಿರುವ ಅನಾನುಕೂಲದ ಬಗ್ಗೆ ಗಮನ ಸೆಳೆದಾಗ, ಕಾರ್ಖಾನೆ ಮುಂಭಾಗದಿಂದ ಬಸ್ ಓಡಿಸಲು ಕ್ರಮ ಕೈಗೊಳ್ಳಲಾಗಿತ್ತು. ನಂತರ ಮತ್ತೆ ಮೇಲ್ಸೆತುವೆ ಮೂಲಕ ಬಸ್ ಓಡಿಸಲಾಗುತ್ತಿದೆ ಎಂದು ತೀವ್ರ ಅಸಮಾಧಾನ ವ್ಯಕ್ತಪಡಿಸಿದರು.ವಿದ್ಯಾರ್ಥಿಗಳ ಅನುಕೂಲಕ್ಕೆ ಸಂಜೆ 4 ರ ನಂತರ ಭಾಲ್ಕಿಯಿಂದ ಉದಗಿರಕ್ಕೆ ಹೆಚ್ಚಿನ ಬಸ್ ಓಡಿಸಬೇಕು. ಹಲಬರ್ಗಾ ಬಸ್ ನಿಲ್ದಾಣದಲ್ಲಿ ಎಲ್ಲ ತಡೆ ರಹಿತ ಬಸ್‌ಗಳ ನಿಲುಗಡೆಗೆ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು. ಕೂಡಲೇ ಬೇಡಿಕೆಗೆ ಸ್ಪಂದಿಸದಿದ್ದರೆ ಬಸ್ ತಡೆದು ಪ್ರತಿಭಟನೆ ನಡೆಸಲಾಗುವುದು ಎಂದು ಎಚ್ಚರಿಸಿದರು. ಸೇನೆಯ ಬೀದರ್ ತಾಲ್ಲೂಕು ಘಟಕದ ಅಧ್ಯಕ್ಷ ಅನಿಲ್ ರಾಜಗೀರಾ, ನಗರ ಘಟಕದ ಅಧ್ಯಕ್ಷ ಸಂತೋಷ್ ಪಾಟೀಲ, ಹರ್ಷ ಬಿರಾದಾರ ಇದ್ದರು.

## ಮನುಜಮತ ವಿಶ್ವಪಥ ಅಭಿಯಾನಕ್ಕೆ ಚಾಲನೆ

ಔರಾದ್.ನ.13:ಕನ್ನಡ ಸಾಹಿತ್ಯ ಪರಿಷತ್ತಿನಿಂದ ಕುವೆಂಪು ಸ್ಮರಣಾರ್ಥ ನಿರಂತರ ಒಂದುವರೆ ತಿಂಗಳು ಶಾಲಾ ಕಾಲೇಜುಗಳಲ್ಲಿ ಆಯೋಜಿಸಲು ನಿರ್ಧರಿಸಿದ 'ಮನುಜ ಮತ ವಿಶ್ವಪಥ' ಅಭಿಯಾನಕ್ಕೆ ಮಂಗಳವಾರ ವನಮಾರಪಳ್ಳಿ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಯಲ್ಲಿ ಚಾಲನೆ ನೀಡಲಾಯಿತು.

ಬಳಿಕ ಮಾತನಾಡಿದ ಕಸಾಪ ಅಧ್ಯಕ್ಷ ಬಾಲಾಜಿ ಅಮರವಾಡಿ, ಮನುಷ್ಯ ತನ್ನಲ್ಲಿರುವ ಸ್ವಾರ್ಥ ಬಿಟ್ಟಾಗ ಮಾತ್ರವೇ ಮಾನವ ವಿಶ್ವ ಮಾನವನಾಗಲು ಸಾಧ್ಯ. ನಾವು ನಮ್ಮಲ್ಲಿರುವ ಕಂದಾಚಾರಗಳನ್ನು ಬಿಟ್ಟು ಎಲ್ಲರೂ ನಮ್ಮವರೇ ನಾವೆಲ್ಲರೂ ಒಂದೇ ಎಂದು ತಿಳಿದು, ಜಾತಿ ಭೇದ ಮರೆತು ಒಂದಾಗಿ ಬಾಳಿದಾಗ ಮನುಜ ಮತ ವಿಶ್ವಪಥವಾಗುತ್ತದೆ.

ಪ್ರಪಂಚದಲ್ಲಿ ಬುದ್ಧಿ ಶಕ್ತಿ ಹೊಂದಿರುವ ಏಕೈಕ ಪ್ರಾಣಿ ಮಾನವ,


ಆದರೆ ಆ ಬುದ್ಧಿ ಶಕ್ತಿಯನ್ನು ನಾವು ದ್ವೇಷಕ್ಕೆ, ಸ್ವಾರ್ಥಕ್ಕೆ ಬಳಸಿಕೊಳ್ಳಲು ದುಂಬಾಲು ಬಿದ್ದಿರುವುದು ಶೋಚನೀಯ, ಆದ್ದರಿಂದ ನಾವು ನಮ್ಮ ನೆರೆಯ ಸುತ್ತ ಎಂದು ಕಳವಳ ವ್ಯಕ್ತಪಡಿಸಿದರು.

ವಿದ್ಯಾರ್ಥಿಗಳ ಓದು ಪರೀಕ್ಷೆಗೆ ಸೀಮಿತವಾಗದೆ, ಬದುಕು ರೂಪಿಸಿಕೊಳ್ಳಲು ಬಳಕೆಯಾಗಬೇಕು. ವಿದ್ಯಾರ್ಥಿಗಳು ಸಾಹಿತ್ಯ ರುಚಿ ಬೆಳೆಸಿಕೊಳ್ಳಬೇಕು ಸ್ವತಃ ಸಾಹಿತ್ಯ ರಚನೆ ಮಾಡಬೇಕು, ತಮ್ಮ ಬರಹದ ಮೂಲಕ ಸಾಮಾಜಿಕ ಅನ್ಯಾಯದ ವಿರುದ್ಧ ಧ್ವನಿ ಎತ್ತುವ ಕೆಲಸ ಮಾಡಬೇಕು. ಯಾವ ಭಾಷೆ ಕಲಿತರು ಕೂಡ ಕನ್ನಡಕ್ಕೆ ಮಾತ್ರ ತಾಯಿ ಸ್ಥಾನ ನೀಡಿದಾಗ ಮಾತೃಭಾಷೆ ಎಂದಿಗೂ ಜೀವಂತ ಎಂದು ತಿಳಿಸಿದರು.

ಪ್ರಾಚಾರ್ಯ ಶಿವಾಜಿ ಪವಾರ ಅವರು ಮಾತನಾಡಿ, ಗಡಿ ಭಾಗದ ಈ ವಾತಾವರಣದಲ್ಲಿ ಕನ್ನಡ ಪಸರಿಸುವ ಕಾರ್ಯ ಮಾಡುತ್ತಿರುವ ಕನ್ನಡ ಸಾಹಿತ್ಯ ಪರಿಷತ್ ಕಾರ್ಯ ಶ್ಲಾಘನೀಯ. ನಾವೆಲ್ಲರೂ ನಾಡು, ನುಡಿ, ಜಲ,

ಭಾಷೆಗೆ ಗೌರವಿಸುವ ಕಾರ್ಯ ಮಾಡಬೇಕು, ಎರಡು ರಾಜ್ಯಗಳ ಗಡಿ ಹಂಚಿಕೊಂಡಿರುವ ನಮ್ಮ ಮೇಲೆ ಮೂರು ಭಾಷೆಗಳ ಪ್ರಭಾವ ಇದೆ. ಕನ್ನಡ ಉಳಿಸಿ ಬೆಳೆಸುವ ಕಾರ್ಯದಲ್ಲಿ ನಾವೆಲ್ಲರೂ ಒಂದಾಗಿ ಕಾರ್ಯ ಮಾಡೋಣ ಎಂದರು.

ಬಾದಲಗಾಂವ ಪಿಕೆಪಿಎಸ್ ಅಧ್ಯಕ್ಷ ಶಿವಾಜಿ ಬಿರಾದಾರ ಕಾರ್ಯಕ್ರಮ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಪ್ರಥಮ ದರ್ಜೆ ಗುತ್ತಿಗೆದಾರ ನಾಗನಾಥ ಮೋರಗೆ, ಶಿಕ್ಷಣ ಪ್ರೇಮಿ ರಾಮದಾಸ ಪಾಟೀಲ, ಕನ್ನಡ ಸೇನೆ ಸಂಘಟನೆ ಅಧ್ಯಕ್ಷ ಶಿವಶಂಕರ ನಿಸ್ತೆ, ಸಂದೀಪ ಪಾಟೀಲ, ಅಮರ ಸ್ವಾಮಿ ಸ್ಥಾವರಮಠ, ಜಗನ್ನಾಥ ದೇಶಮುಖ, ರಾಜೇಂದ್ರ ಸೇರಿದಂತೆ ವಸತಿ ಶಾಲೆಯ ಸಿಬ್ಬಂದಿಗಳು ಹಾಗೂ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.



# ವಿದ್ಯುತ್ ಬಿಲ್ ಹೆಚ್ಚಾಳ ವಿರೋಧಿಸಿ ಹೋರಾಟ



ಜೇವರ್ಗಿ:ನ.13:ಭಾರತ ಕಮಿನಿಸ್ಟ್ ಪಕ್ಷ ಸಿಪಿಐ ಹಾಗು ಆದರ್ಶ ಗ್ರಾಮ ಸಮಿತಿ ಯಾಳವಾರ ಜೆವರ್ಗಿ ಯಡ್ರಾಮಿ ತಾಲೂಕ ರೈತರ ಹೋರಾಟ ಸಮೀತಿಗಳ ನೇತೃತ್ವದಲ್ಲಿ

ಯಾಳವಾರ ಸಿಗರಥಹಳ್ಳಿ ಚಿಗರಹಳ್ಳಿ ಸೋಮನಾಥಹಳ್ಳಿ ಕೊಡಚಿ ಗ್ರಾಮಗಳಲ್ಲಿ ಗೃಹಕರಿಗೆ ಬೇಕಾ ಬಿಟ್ಟಿ ವಿದ್ಯುತ್ ಬಿಲ್ ಕೊಟ್ಟು ವಂಚಿಸಿ ಕೆಲವು ಜನರಿಂದ ಹಣ ಪಡೆದು ಬಿಲ್ನಲ್ಲಿ ಹೊಂದಾಣಿಕೆ ಮಾಡುವದು ಹಣ ಕೊಡದೆ ಇದ್ದವರ ಮನೆಗಳ ವಿದ್ಯುತ್ ಕಲೆಕ್ಷನ್ ಕಡಿತ ಮಾಡುವದು ಗೃಹ ಜ್ಯೋತಿ ಯೋಜನೆ ಅಡಿಯಲ್ಲಿ ಉಚಿತ ಸಿಗ್ಬೇಕಾದಂತ ವಿದ್ಯುತ್ ಒಂದು ತಿಂಗಳಿಗೆ ಒಂದು ಲಕ್ಷ ಐವತ್ತು, ಸಾವಿರು,

ನಲವತ್ತು, ಸಾವಿರು, ಇಪ್ಪತ್ತು ಸಾವಿರ, ಹತ್ತು ಸಾವಿರ.ಹಾಗೆ ಹೆಚ್ಚು ಕಡಿಮೆ ಬಿಲ್ಲು ಕೊಟ್ಟು ಸಾರ್ವಜನಿಕರ ಮನೆಯ ವಿದ್ಯುತ್ ಕಟ್ ಮಾಡಿ ಜನರಿಗೆ ಜೆಸ್ಕಾಂ ಅಧಿಕಾರಿಗಳು ತೊಂದರೆ ಕೊಡುವುದನ್ನು ಖಂಡಿಸಿ ಜೇವರ್ಗಿ ಜೆಸ್ಕಾಂ ಕಛೇರಿ ಎದರು ಹೋರಾಟ ನಡೆಸಲಾಯಿತು.

ಧರಣಿ ಸ್ಥಳಕ್ಕೆ ಮಾನ್ಯ executive engineer ಜೆಸ್ಕಾಂ ಕಲ್ಬುರ್ಗಿ ಹಾಗೂ ಸಹಾಯಕ ಅಭಿಯಂತರರು ಎ ಇ ಇ ಜೇವರ್ಗಿ ವಿದ್ಯುತ್ ಇಲಾಖೆ ಅಧಿಕಾರಿಗಳು ಬಂದು ಬೇಡಿಕೆಗಳ ಬಗ್ಗೆ ಚರ್ಚಿಸಿ ತಮ್ಮ ಇಲಾಖೆಯ ವತಿಯಿಂದ ಆಗಿರುವ ತಪ್ಪುಗಳನ್ನ ಕೂಡಲೇ ಸರಿಪಡಿಸುತ್ತೇವೆ ಗೃಹ ಜೋತಿ ಯೋಜನೆಯ ಎಲ್ಲಾ ಗೃಹಕಾರಿಗೆ ಜಿರೋ,

ಬಿಲ್ಲು ಮಾಡಿಕೊಡುವುದಾಗಿ ಹೇಳಿ ಕೆಲವು ಗೃಹಕರಿಂದ ಬಿಲ್ ಕಟ್ಟಿಸಿಕೊಂಡಿದ್ದು ವಾಪಾಸ್ ಮಾಡುದಾಗಿ ಒಪ್ಪಿಕೊಂಡರು ಸಬ್ ಸ್ಟೇಷನ್ ಸಲುವಾಗಿ 15 ದಿನಗಳಲ್ಲಿ ರೈತರಿಂದ ಜಮೀನು ಖರೀದಿಸಿ ಕೆಲವು ತಿಂಗಳಲ್ಲಿ ಕೆಲಸ ಪ್ರಾರಂಭಿಸಿ ರೈತರಿಗೆ ಹಾಗು ಸಾರ್ವಜನಿಕರಿಗೆ ಅನುಕೂಲ ಮಾಡಿ ಕೊಡುವುದಾಗಿ ಆಶ್ವಾಸನೆ ಕೊಟ್ಟ ನಂತರ ಹೋರಾಟ ತಾತ್ಕಾಲಿಕವಾಗಿ ಹಿಂತೆಗೆದುಕೊಳ್ಳಲಾಯಿತು.

ಈ ಸಂದರ್ಭದಲ್ಲಿ ಡಾಕ್ಟರ್ ಮಹೇಶ್ ಕುಮಾರ್ ರಾಠೋಡ ಇಬ್ರಾಹಿಂ ಪಟೇಲ್ ಯಾಳವಾರ ಅಧ್ಯಕ್ಷರಾದ ಆದರ್ಶ ಗ್ರಾಮ ಸಮಿತಿ ಬಾಬು ಬಿ ಪಾಟೀಲ್ ರಾಜಾ ಪಟೇಲ್ ಪೊಲೀಸ್ ಅಖಿಲ್ ಪಾಶ ಜಾಗ್ದಾರ್ ಸದ್ದಾಮ್ ಪಟೇಲ್ ರಿಜ್ವಾನ್ ಪಟೇಲ್ ಶಾಂತಯ್ಯ ಗುತ್ತೇದಾರ್ ಅಜೀಜ್ ಪಟೇಲ್ ಹುಸೇನ್ ಪಟೇಲ್ ಟೀಪು ಸುಲ್ತಾನ್ ಜಾಫರ್ ಪಟೇಲ್ ದಾವೂದ್ ಹಾನೂರ್ ಮಹಮ್ಮದ್ ಚೌದ್ರಿ ಗಫೂರ್ ಪಟೇಲ್ ಹಾಗೂ ಉಪಸ್ಥಿತರಿದ್ದರು

# ಧ್ವನಿ ಸುರುಳಿಗಳು ನಾಡಿನ ಸಾಂಸ್ಕೃತಿಕ ಸೊಬಗಿನ ಪ್ರತೀಕ : ಹಾಸಿಂಪೀರ ವಾಲಿಕಾರ

ವಿಜಯಪುರ,ನ.13:ಯುವ ಕವಿಮಿತ್ರ, ಕು .ಮಾಳು ವಾಲಿಕಾರ ಅವರು ಸ್ವತ: ಸಾಹಿತ್ಯ ರಚಿಸಿ ಅದಕ್ಕೆ ಪೂರಕವಾದ ಚಿತ್ರಗಳನ್ನು ಸಂಯೋಜಿಸಿ ಅಖಂಡ ಕರ್ನಾಟಕದ ಸಂಸ್ಕೃತಿಯನ್ನು ಬಿಂಬಿಸುವ "ಭೂಮಿಯ ಮೇಲಿರೋ ಸ್ವರ್ಗವೇ ನನ್ನದು" ಎಂಬ ಧ್ವನಿಸುರುಳಿಯನ್ನು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಹಾಸಿಂಪೀರ ವಾಲಿಕಾರ ಬಿಡುಗಡೆಗೊಳಿಸಿ ಮಾತನಾಡಿದರು.

ವಿಜಯಪುರ ನಗರದ ಜಿಲ್ಲಾ ಪಂಚಾಯತ್ ರಸ್ತೆಯಲ್ಲಿರುವ ಗಾಂಧಿ ಭವನದಲ್ಲಿ ಏರ್ಪಡಿಸಿದ್ದ 70ನೇ ಕರ್ನಾಟಕ ರಾಜ್ಯೋತ್ಸವ ಸಂದರ್ಭದಲ್ಲಿ ಧ್ವನಿಸುರುಳಿ ಬಿಡುಗಡೆಗೊಳಿಸಿ ಮಾತನಾಡಿದ ಅವರು, ಕನ್ನಡ ನಾಡಿನ ಕರಾವಳಿ ಕರ್ನಾಟಕ, ಮಲೆನಾಡು, ಬಯಲು ಸೀಮೆ, ಹಚ್ಚಹಸಿರಿನ ಪ್ರಕೃತಿ ಸೌಂದರ್ಯದ ವರ್ಣನೆಯನ್ನು ತಮ್ಮ ಧ್ವನಿ ಸುರುಳಿಯಲ್ಲಿ ಪ್ರತಿಪಾದಿಸಿದ ಮಾಳು ವಾಲಿಕಾರ ಅವರ ಕಲ್ಪನೆಯಲ್ಲಿ ಮೂಡಿ ಬಂದ ಕರುನಾಡಿನ ವರ್ಣನೆ ನಿಜಕ್ಕೂ ರೋಮಾಂಚನಕಾರಿಯಾಗಿದ್ದು ಇಂತಹ ಧ್ವನಿಸುರುಳಿಗಳು ಸಾಂಸ್ಕೃತಿಕ ಸೊಬಗಿನ ಪ್ರತೀಕ ಎಂದ ಅವರು ಇವರೊಬ್ಬ ಅದ್ಭುತ ಕವಿ, ಕಲಾವಿದರಾಗುವುದರಲ್ಲಿ ಯಾವುದೇ ಸಂದೇಹವಿಲ್ಲ ಎಂದರು.

"ಕಪ್ಪು ಮಣ್ಣಿನ ನಾಡಿನಲ್ಲಿ ಸಿರಿ ಗಂಧದ ಗುಡಿಯಲ್ಲಿ" ಎಂಬ ಕರುನಾಡಿನ ಕಪ್ಪುಮಣ್ಣಿನ ಸೌಂದರ್ಯದ ಹಿನ್ನೆಲೆ ಒಳಗೊಂಡ ಧ್ವನಿಸುರುಳಿಯನ್ನು ಜಿಲ್ಲಾ ಕಸಾಪ ಗೌರವ ಅಧ್ಯಕ್ಷೆ ಭಾರತಿ ಪಾಟೀಲ ಬಿಡುಗಡೆಗೊಳಿಸಿ ಮಾತನಾಡಿದರು. ಮಾಳು ವಾಲಿಕಾರ ಅವರು ಈಗಾಗಲೇ ಹಲವಾರು ಧ್ವನಿಸುರುಳಿ ಬಿಡುಗಡೆಗೊಳಿಸಿದ್ದು, ಚಿಂಕಾರ ವನ್ಯಜೀವಿಧಾಮ, ಕೆಚ್ಚೆದೆಯ ಕನ್ನಡಿಗರು ಹಲಗಲಿಯ ಬೇಡರು, ಭೂಮಿಯ ಮೇಲಿನ ಕೈಲಾಸ ಹುಲಜಂತಿ, ಗುಳಬಾಳ ಕ್ರಾಸಿನ ಅಂಜನಿಪುತ್ರ. ಹೀಗೆ ಹಲವಾರು ಧ್ವನಿ ಸುರುಳಿಗಳು ಬಿಡುಗಡೆಯಾಗಿದ್ದು, ಇದೀಗ ಮಾಗವಾ ಎಂಬ ಯ್ಯೂಟುಬ್ ಚಾನೆಲನಲ್ಲಿ ಬಿಡುಗಡೆಯಾದ ಎರಡು ಅದ್ಭುತವಾದ ಧ್ವನಿಸುರುಳಿಗಳು ಇತಿಹಾಸದ ಪುಟ ಸೇರಿದವು ಎಂದರು.

ಕಾರ್ಯಕ್ರಮದ ವೇದಿಕೆಯಲ್ಲಿ ಕಸಾಪ ಗೌರವ ಕಾರ್ಯದರ್ಶಿ ಡಾ.ಮಾಧವ ಗುಡಿ, ಶಿಲ್ಪಾ ಭಸ್ಮೆ, ಗೌರವ ಕೋಶಾಧ್ಯಕ್ಷ ಅಭಿಷೇಕ ಚಕ್ರವರ್ತಿ, ಡಾ. ಆನಂದ ಕುಲಕರ್ಣಿ, ಕಮಲಾ ಮುರಾಳ, ಅಲ್ಲಮಪ್ರಭು ಮಲ್ಲಿಕಾರ್ಜುನಮಠ, ಜಗದೀಶ ಬೋಳಸೂರ, ಮಹ್ಮದಗೌಸ ಹವಾಲ್ದಾರ, ರಾಜೇಶ್ವರಿ ಮೋಪಗಾರ, ಯುವ ಕವಿ, ಮಾಳು ವಾಲಿಕಾರ, ಪ್ರಶಾಂತ ಬೆಣ್ಣಿಮುದ್ದಿ, ರಿಯಾಜ ಪಿಂಜಾರ ಸೇರಿದಂತೆ ಮುಂತಾದವರು ಉಪಸ್ಥಿತರಿದ್ದು ಮಾತನಾಡಿದರು. ಕಾರ್ಯಕ್ರಮದಲ್ಲಿ ಅರ್ಜುನ ಶಿರೂರ, ಜಿ.ಎಸ್.ಬಳ್ಳೂರ, ಮಹಾದೇವ ಮೋಪಗಾರ, ಲತಾ ಗುಂಡಿ, ಶಾಂತಾ ವಿಭೂತಿ, ಗಿರಿಜಾ ಪಾಟೀಲ, ರಾಜೇಶ್ವರಿ ಜುಗತಿ, ದೊಡ್ಡಣ್ಣ ಭಜಂತ್ರಿ ಸೇರಿದಂತೆ ನೂರಕ್ಕೂ ಹೆಚ್ಚು ಕನ್ನಡಾಭಿಮಾನಿಗಳು ಭಾಗವಹಿಸಿ ಧ್ವನಿಸುರುಳಿ ಬಿಡುಗಡೆ ಸಮಾರಂಭವನ್ನು ಯಶಸ್ವಿಗೊಳಿಸಿದರು.




# ಕಲ್ಯಾಣ ಕರ್ನಾಟಕದ ಎಲ್ಲಾ ಜಿಲ್ಲೆಗಳು ನೂರಕ್ಕೆ ನೂರರಷ್ಟುಫಲಿತಾಂಶ ಸಾಧಿಸುವ ಗುರಿ ಇಟ್ಟುಕೊಳ್ಳಬೇಕು

ಕಲಬುರಗಿ,ನ.13 :ಮುಂಬರುವ ಎಸ್.ಎಸ್.ಎಲ್.ಸಿ.ಪರೀಕ್ಷೆಯಲ್ಲಿ ಕಲ್ಯಾಣ ಕರ್ನಾಟಕದ ಎಲ್ಲಾ ಜಿಲ್ಲೆಗಳು ನೂರಕ್ಕೆ ನೂರರಷ್ಟು ಫಲಿತಾಂಶ ಸಾಧಿಸುವ ಗುರಿ ಇಟ್ಟುಕೊಳ್ಳಬೇಕು ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತೆ ಇಲಾಖೆಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳಾದ ವ್ಹಿ. ರಶ್ಮಿ ಮಹೇಶ ಅವರು ಹೇಳಿದರು.



ಅವರು ಸೋಮವಾರ ಕಲಬುರಗಿ ಶಾಲಾ ಶಿಕ್ಷಣ ಇಲಾಖೆಯ ಅಪರ ಆಯುಕ್ತರ ಕಚೇರಿ ವತಿಯಿಂದ ಕಲ್ಯಾಣ ಕರ್ನಾಟಕ ಪ್ರದೇಶದ ಎಸ್.ಎಸ್.ಎಲ್.ಸಿ. ಫಲಿತಾಂಶ ಸುಧಾರಣೆಗಾಗಿ ಕಲಬುರಗಿಯ ಅಪ್ಪಾ ಪಬ್ಲಿಕ್ ಶಾಲೆಯಲ್ಲಿ ಬೀದರ, ಕಲಬುರಗಿ ಹಾಗೂ ಯಾದಗಿರಿ ಜಿಲ್ಲೆಗಳ ತಾಲೂಕಾವಾರು ವಿಷಯ ಶಿಕ್ಷಕರಿಗೆ ಹಮ್ಮಿಕೊಳ್ಳಲಾಗಿದ್ದ ಒಂದು ದಿನದ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದರು.

ಕಲ್ಯಾಣ ಕರ್ನಾಟಕದ ಎಲ್ಲಾ ಜಿಲ್ಲೆಗಳು ಮುಂಬರುವ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಕಲ್ಯಾಣ ಕರ್ನಾಟಕದ ಫಲಿತಾಂಶ ನೂರಕ್ಕೆ ನೂರರಷ್ಟು ಸಾಧಿಸುವ ಗುರಿ ಇಟ್ಟುಕೊಳ್ಳಬೇಕು. ಇದಕ್ಕಾಗಿ ಪ್ರತಿ ಶಾಲೆಯಲ್ಲಿ ಮಕ್ಕಳ ಕಲಿಕಾ ಮಟ್ಟ ಆಧರಿಸಿ ಕ್ರಿಯಾ ಯೋಜನೆ ರೂಪಿಸಿಕೊಳ್ಳಬೇಕು. ಶಿಕ್ಷಕರು ಮಾತ್ರವಲ್ಲದೇ ಎಲ್ಲಾ ಹಂತದ ಅಧಿಕಾರಿಗಳು ಬರುವ ಮೂರು ತಿಂಗಳು ಪರೀಕ್ಷಾ ಫಲಿತಾಂಶ ಸುಧಾರಣೆಗೆ ತಮ್ಮನ್ನು ತಾವು ತೊಡಗಿಸಿಕೊಳ್ಳುವಂತೆ ಕಾರ್ಯಾಗಾರದಲ್ಲಿ ಪಾಲ್ಗೊಂಡ ಎಲ್ಲಾ ಅಧಿಕಾರಿಗಳಿಗೆ ಮತ್ತು ಶಿಕ್ಷಕರಿಗೆ ಸೂಚಿಸಿದರು.

ಕಲಬುರಗಿ ಶಾಲಾ ಶಿಕ್ಷಣ ಇಲಾಖೆಯ ಅಪರ ಆಯುಕ್ತರಾದ ಪಾಂಡ್ವೆ ರಾಹುಲ್ ತುಕಾರಾಮ ಅವರು ಮಾತನಾಡಿ, ಮುಂಬರುವ ಎಸ್.ಎಸ್.ಎಲ್.ಸಿ. ಪರೀಕ್ಷೆ ಫಲಿತಾಂಶ ಸುಧಾರಣೆಯ ಹಿನ್ನೆಲೆಯಲ್ಲಿ ಪರೀಕ್ಷಾ ಮಂಡಳಿ ಬಿಡುಗಡೆ ಮಾಡಿರುವ ಮಾದರಿ ಪ್ರಶ್ನೆಪತ್ರಿಕೆಗಳನ್ನು ಎಲ್ಲಾ ವಿದ್ಯಾರ್ಥಿಗಳಿಗೆ ಪರಿಚಯಿಸಬೇಕು. ನೀಲನಕ್ಷೆಯಂತೆ ಪ್ರಶ್ನೆ ಪತ್ರಿಕೆಗಳನ್ನು ತಯಾರಿಸುತ್ತಿರುವ ಹಿನ್ನೆಲೆಯಲ್ಲಿ ಅದರ ಸಂಪೂರ್ಣ ಪರಿಚಯ ಮಾಡಿಕೊಳ್ಳಬೇಕು. ಪ್ರಸಕ್ತ ಸಾಲಿನ ಎಸ್.ಎಸ್.ಎಲ್.ಸಿ. ಪರೀಕ್ಷೆ ಫಲಿತಾಂಶ ಸುಧಾರಣೆಗೆ ಎಲ್ಲರೂ ಶ್ರಮಿಸಬೇಕು.

ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ಇನ್ನು 14 ವಾರಗಳು ಬಾಕಿ ಇರುವದರಿಂದ ಪ್ರತಿ ವಾರದಲ್ಲಿ ಮಕ್ಕಳ ಕಲಿಕೆಯನ್ನು ದಾಖಲಿಸಲು ಅಭ್ಯಾಸದ ಹಿಂಬಾಲಿಕೆ (Tracking) ಯನ್ನು ಎಲ್ಲಾ ಶಾಲೆಗಳಲ್ಲಿ ಅನುಸರಿಸುವುದು ಕಡ್ಡಾಯವಾಗಿದೆ ಎಂದು ಹೇಳಿದರು.

ಕಲಬುರಗಿ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಭಂವಾರ ಸಿಂಗ್ ಮೀನಾ ಅವರು ಮಾತನಾಡಿ, ಜಿಲ್ಲೆಯ ಫಲಿತಾಂಶ ರಾಜ್ಯದ ಸರಾಸರಿಗಿಂತ ಕಡಿಮೆ ಇರುವದರಿಂದ ಕಲಬುರಗಿ ಜಿಲ್ಲಾ ಪಂಚಾಯಿತಿಯಿಂದ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು, ಎಲ್ಲಾ ಅಧಿಕಾರಿಗಳು, ಶಿಕ್ಷಕರು ಸಕ್ರಿಯವಾಗಿ ಅದರಲ್ಲಿ ತೊಡಗಿಸಿಕೊಂಡು ಫಲಿತಾಂಶ ಸುಧಾರಣೆಗೆ ಕ್ರಮವಹಿಸಬೇಕು ಎಂದರು.

ಈ ಕಾರ್ಯಾಗಾರದಲ್ಲಿ ವಿಷಯ ಸಂಪನ್ಮೂಲ ಶಿಕ್ಷಕರು, ಉಪನಿರ್ದೇಶಕರು, ಡಯಟ್ ಪ್ರಾಂಶುಪಾಲರು, ಕ್ಷೇತ್ರ ಶಿಕ್ಷಣಾಧಿಕಾರಿಗಳು, ಡಯಟ್ ಉಪನ್ಯಾಸಕರು, ವಿಷಯ ಪರಿವೀಕ್ಷಕರು, ಶಿಕ್ಷಣಾಧಿಕಾರಿಗಳು, ಮೂರು ಜಿಲ್ಲೆಗಳ ಪ್ರತಿಯೊಂದು ತಾಲೂಕಿನ ಆರು ವಿಷಯಗಳ ಆರು ಸಂಪನ್ಮೂಲ ವ್ಯಕ್ತಿಗಳು ಸೇರಿದಂತೆ ಒಟ್ಟು 168 ಜನ ಸಂಪನ್ಮೂಲ ವ್ಯಕ್ತಿಗಳು ಭಾಗವಹಿಸಿದ್ದರು.

# ಕೋಮು ಗಲಭೆ ಎಬ್ಬಿಸುವ ನೋಂದಣಿ ಇಲ್ಲದ ಆರ್.ಎಸ್.ಎಸ್ ರದ್ದುಗೊಳಿಸುವಂತೆ ಆಗ್ರಹಿಸಿ ಡಿಎಸ್ಎಸ್ ಪ್ರತಿಭಟನೆ

ಚಿತ್ತಾಪುರ;ನ.13:ದೇಶದಲ್ಲಿ ಕೋಮು ದ್ವೇಷ ಸೃಷ್ಟಿಸಿ ಜಾತಿ ಜಾತಿಗಳ ನಡುವೆ ಕೋಮು ಗಲಭೆ ಎಬ್ಬಿಸುವ ನೋಂದಣಿ ಇಲ್ಲದ ಆರ್.ಎಸ್.ಎಸ್ ಸಂಘಟನೆಯನ್ನು ಸರ್ಕಾರ ರದ್ದುಗೊಳಿಸಬೇಕು ಎಂದು ಆಗ್ರಹಿಸಿ ಕರ್ನಾಟಕ ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ವಾದ) ತಾಲೂಕು ಸಮಿತಿ ನೇತೃತ್ವದಲ್ಲಿ ಪ್ರತಿಭಟನೆ ನಡೆಸಿದ ಮುಖಂಡರು ಮುಖ್ಯಮಂತ್ರಿಗಳಿಗೆ ಬರೆದ ಮನವಿ ಪತ್ರವನ್ನು ತಹಶೀಲ್ದಾರ್ ನಾಗಯ್ಯ ಹಿರೇಮಠ ಅವರಿಗೆ ಸಲ್ಲಿಸಿದರು.

ಜಿಲ್ಲಾ ಖಜಾಂಚಿ ದೇವಿಂದ್ರ ಕುಮಸಿ ಮಾತನಾಡಿ, ಇತ್ತಿಚೆಗೆ ಆರ್ಎಸ್ಎಸ್ 100 ವರ್ಷ ಪೂರೈಸಿದೆ ಎಂದು ಕಾನೂನು ಬಾಹಿರವಾಗಿ ತನಗೆ ಬೇಕಾದ ಹಾಗೆ ಸಂಭ್ರಮಾಚರಣೆಯಲ್ಲಿ ತೊಡಗಿದೆ. ಮುಂಗಡವಾಗಿ ಅನುಮತಿ ಇಲ್ಲದೆ ತನಗೆ ಬೇಕಾದ ಸ್ಥಳಗಳಲ್ಲಿ ಪಥ ಸಂಚಲನ ಮಾಡಿ ತೊಂದರೆ ಕೊಡುತ್ತಿದೆ. ಸಚಿವ ಪ್ರಿಯಾಂಕ್ ಖರ್ಗೆ ಅನುಮತಿ ಇಲ್ಲದೆ ಸರ್ಕಾರಿ ಇತರೆ ಸ್ಥಳಗಳಲ್ಲಿ ಕಾರ್ಯಕ್ರಮಕ್ಕೆ ಅವಕಾಶ ಕೊಡಬಾರದೆಂದು ಸರ್ಕಾರಕ್ಕೆ ಪತ್ರ ಬರೆದ ಪ್ರಯುಕ್ತ ಒಬ್ಬ ಮನುವಾದಿ ಆರ್ಎಸ್ಎಸ್ ಕಾರ್ಯಕರ್ತ ಪ್ರಿಯಾಂಕ್ ಖರ್ಗೆ ಅವರನ್ನು ವಾಟ್ಸಾಪ್ ನಲ್ಲಿ ಅಶ್ಲೀಲ ಶಬ್ದ ಬಳಿಸಿದಲ್ಲದೆ ಅವರ ಫೋನಿಗೆ ಕರೆ ಮಾಡಿ ಜೀವ ಬೇದರಿಕೆ ಹಾಕಿದರು. ಇಂತಹ ಕೀಳು ಮಟ್ಟದ ಮನಸ್ಥಿತಿ ಹೊಂದಿರುವ ಆರ್ಎಸ್ಎಸ್ ಸಂಘಟನೆಯನ್ನು ಬ್ಯಾನ್ ಮಾಡಬೇಕು ಮತ್ತು ಇಂತಹ ಮನುವಾದಿಗಳ ವಿರುದ್ಧ ಎದೆಗೊಟ್ಟು ಮುನ್ನಡೆಯಬೇಕು, ಮುಷ್ಟಿ ಬಿಗಿ ಹಿಡಿದು ಧಿಕ್ಕಾರ ಹೇಳಬೇಕು. ಚಾತುರ್ವರ್ಣ ಭಾರತವನ್ನು ಕಟ್ಟಲು ಹೊರಟ ಸಂಘ ಪರಿವಾರದ ಹಗಲುಗನಸು ಹುಸಿಯಾಗಿಸಿ ಪ್ರಬುದ್ಧ ಭಾರತ ನಿರ್ಮಾಣಕ್ಕಾಗಿ ಪಣ ತೊಡಬೇಕಿದೆ ಎಂದು ಹೇಳಿದರು.

ಹಿಂದೂ ಮಹಿಳೆಯರಿಗೆ ಪುರುಷರಷ್ಟೇ ಸಮಾನ ಹಕ್ಕು ನೀಡಲು ಬಯಸಿದ್ದ ಹಿಂದೂ ಕೋಡ್ ಬಿಲ್ ಜಾರಿಯಾಗಲು ಅಂಬೇಡ್ಕರ್ ಹೋರಾಡುತ್ತಿದ್ದರೆ ಅದರ ಪ್ರತಿಯನ್ನು ಸುಟ್ಟು ಹಾಕಿ ಆರ್.ಎಸ್.ಎಸ್ ವಿಕೃತಿ ಮೆರೆದಿತ್ತು ಇತ್ತಿಚೆಗೆ ಭಾರತದ ಮುಖ್ಯ ನ್ಯಾಯಾಧೀಶರಾದ ಜಸ್ಟೀಸ್ ಗವಾಯಿ ರವರ ಮೇಲೆ ಶೂ ಎಸೆಯಲಾಗಿತ್ತು. ಆ ಕೃತ್ಯ ಮಾಡಿದ ವಕೀಲ ರಾಕೇಶ ಕಿಶೋರ ಸನಾತನ ಧರ್ಮ ಉಳಿಸಲು ಶೂ ಎಸೆದೆ ಎಂದು ಎದೆ ಉಬ್ಬಿಸಿ ಹೇಳುತ್ತಾನೆ. ಭಾರತ ದೇಶದಲ್ಲಿ ಆತ ವಕೀಲನಾಗಿದ್ದು ಮನುಸ್ಮೃತಿಯಿಂದಲೊ? ಅಥವಾ ಸಂವಿಧಾನದಿಂದಲೋ ಎಂದು ಪ್ರಶ್ನಿಸಿದರು.

ತಾಲೂಕು ಸಂಚಾಲಕ ಮೋನಪ್ಪ ನಡಗೇರಿ ಮಾತನಾಡಿ, ಭಾರತ ಸಂವಿಧಾನದ ಮೇಲೆ ಯುದ್ಧ ಸಾರಿರುವ ಆರ್ಎಸ್ ಎಸ್ ಮತ್ತು ಬಿಜೆಪಿ ರವರ ಆಟ ಅತೀರೇಖಾವಾಗಿದೆ, ಇಂತಹ ದೇಶ ದ್ರೋಹಿಗಳಿಗೆ ತಕ್ಕ ಪಾಠ ಕಲಿಸದೇ ಇದ್ದರೆ ಭಾಗ್ಯವಿದಾತ ಭಾರತವನ್ನು ಬಲಿಭಾರತವಾಗಿಸುತ್ತಾರೆ ಇದಕ್ಕೆ ಅವಕಾಶ ನೀಡಬಾರದು ಎಂದು ಹೇಳಿದರು.

ಗುಲ್ಬರ್ಗಾ ವಿಶ್ವವಿದ್ಯಾಲಯಕ್ಕೆ ಭಾರತ ರತ್ನ ಡಾ.ಬಿ. ಆರ್ ಅಂಬೇಡ್ಕರ್ ಹೆಸರು ಇಡಬೇಕು, ಸಚಿವ ಪ್ರಿಯಾಂಕ್ ಖರ್ಗೆ ಯವರಿಗೆ ಕರೆ ಮಾಡಿ ಅಶ್ಲೀಲ ಪದ ಬಳಸಿ ಹಾಗೂ ಜೀವ ಬೆದರಿಕೆ ಹಾಕಿದವರನ್ನು ಕಾನೂನು ಪ್ರಕಾರ ಶಿಕ್ಷೆಗೆ ಗುರಿ ಪಡಿಸಬೇಕು,





# ಸಾಹಿತ್ಯವು ಜ್ಞಾನ ಅಭಿವೃದ್ಧಿಯ ಮೂಲ:ನಂಜಯ್ಯನಮಠ



ವಿಜಯಪುರ,ನ.13: ಸಾಹಿತ್ಯವು ಜ್ಞಾನ ಅಭಿವೃದ್ಧಿಯ ಮೂಲ. ಶ್ರೀಮಂತಿಕೆಯ ಜ್ಞಾನಾರ್ಜನೆಗೆ ಪೂರಕವಲ್ಲ. ಸಾಹಿತ್ಯ ಸುಂದರ ಬದುಕಿನ ಮೂಲ. ಸಾಹಿತ್ಯ ಓದುವಿಕೆಯಿಂದ ಮನುಷ್ಯನಲ್ಲಿರುವ ಅಸೂಯೆ. ಮದ. ಮತ್ಸರ.

ದುರಹಂಕಾರ ನಾಶ ಮಾಡಿ ತಾಳ್ಮೆ, ಸಹನೆ ಹಾಗೂ ಪರೋಪಕಾರ ಗುಣ ಬೆಳೆಸುತ್ತದೆ ಎಂದು ಕೈಗಾರಿಕೆ ಹಾಗೂ ಮೂಲ ಸೌಲಭ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷ ಎಸ್.ಜಿ. ನಂಜಯ್ಯನಮಠ ಅಭಿಪ್ರಾಯ ವ್ಯಕ್ತಪಡಿಸಿದರು.

ಮಂಗಳವಾರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಸಭಾಂಗಣದಲ್ಲಿ ಕಸಾಪದಿಂದ ಗೌರವ ಸನ್ಮಾನ ಸ್ವೀಕರಿಸಿ ಮಾತನಾಡಿ, ನನ್ನ ಐದು ದಶಕಗಳಿಂದ ರಾಜಕೀಯ ಜೀವನದ ನಡೆಗೆ ಸಾಹಿತ್ಯ ಅಧ್ಯಯನ ಮಾರ್ಗದರ್ಶನವಾಯಿತು ಎಂದರು.

ಇದೇ ವೇಳೆ ತಮ್ಮ ಜೀವನದ ಕತೆಯನ್ನು ಕವಿತೆಯ ಮೂಲಕ ಕವನ ವಾಚಿಸಿದರು.

ಕಸಾಪ ಅಧ್ಯಕ್ಷ ಹಾಸಿಂಪೀರ ವಾಲಿಕಾರ ಮಾತನಾಡಿ, ಎಸ್.ಜಿ. ನಂಜಯ್ಯನಮಠ ಅವರ ಜೀವನವೇ ಇತರರಿಗೆ ಸ್ಫೂರ್ತಿ. ಕವಿಗಳು, ಬರಹಗಾರರು, ವಿಮರ್ಶಕರು ಆಗಿರುವ ಇವರು ಕನ್ನಡ ಸಾಹಿತ್ಯ ಲೋಕಕ್ಕೆ ಎರಡು ಗ್ರಂಥಗಳನ್ನು ನೀಡಿದ್ದಾರೆ. ತಂದೆಯವರ ನೆನಪಿಗಾಗಿ ದತ್ತಿ ನಿಧಿ ನೀಡಿದ್ದು ಇವರ ಸಾಹಿತ್ಯಿಕ ಆಸಕ್ತಿಗೆ ಸಾಕ್ಷಿಯಾಗಿದೆ ಎಂದರು.

ಜಗದೀಶ ಬೋಳಸೂರ. ರಮೇಶ ಸೂಳಿಬಾವಿ. ಶ್ರೀದೇವಿ ಉತ್ಲಾಸರ. ಎಲ್.ಬಿ. ಶೇಖ, ಬಿ.ಎಂ. ಅಜೂರ, ಜಯಶ್ರೀ ಹಿರೇಮಠ, ಮಂಜುಳಾ ಕಾಳಗಿ, ರಾಜೇಶ್ವರಿ ಮೋಪಗಾರ, ಪ್ರೊ. ದೊಡ್ಡಣ ಬಜಂತ್ರಿ, ಜಿ.ಎಸ್. ಬಿಳೂರ ವೇದಿಕೆಯ ಮೇಲಿದ್ದರು.

ರವಿ ಕಿತ್ತೂರ, ಅರ್ಜುನ ಶಿರೂರ, ಲತಾ ಗುಂಡಿ, ಗಂಗಮ್ಮ ರೆಡ್ಡಿ, ಸಿದ್ದಣ್ಣ ಸಾತಲಗಾಂವ, ಅನೀತಾ ಕಾಂಬಳೆ, ಶ್ರೀಧರ ಹೆಗಡೆ, ಪರಶುರಾಮ ಚಲವಾದಿ ಮುಂತಾದವರು ಉಪಸ್ಥಿತರಿದ್ದರು.

ಪ್ರಾಸ್ತಾವಿಕವಾಗಿ ಗೌರವ ಕೋಶಾಧ್ಯಕ್ಷ ಅಭಿಷೇಕ ಚಕ್ರವರ್ತಿ. ಮಾತನಾಡಿದರು ಶಶಿಕಲಾ ನಾಯ್ಕೋಡಿ ಪ್ರಾರ್ಥಿಸಿದರು. ಮಹಮ್ಮದಗೌಸ ಹವಾಲ್ದಾರ ಸ್ವಾಗತಿಸಿದರು. ಸಾಹಿತಿ ಎಂ.ಬಿ. ಕಟ್ಟಿಮನಿ ನಿರೂಪಿಸಿದರು. ಸಾಹಿತಿ ಡಾ. ಸಂಗಮೇಶ ಮೇತ್ರಿ ವಂದಿಸಿದರು.

# ಆರೋಗ್ಯ ಶಿಬಿರದ ಪ್ರಯೋಜನ ಪಡೆಯಿರಿ:ಡಾ.ಸಂಜೀವ್ ಪಾಟೀಲ

ಸೇಡಂ,ನ.13:ಪಟ್ಟಣದ ಹತ್ತಿರ ಇರುವ ನೀಲಹಳ್ಳಿ ಗ್ರಾಮದಲ್ಲಿ ಮಂಗಳವಾರ ಜಿಲ್ಲಾ ಪಂಚಾಯತ್, ಜಿಲ್ಲಾ ಅರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಕಲಬುರಗಿ ತಾಲೂಕಾ ಅರೋಗ್ಯ ಕೇಂದ್ರ ಹಾಗೂ ತಾಲೂಕು ಸಾರ್ವಜನಿಕರ ಆಸ್ಪತ್ರೆ ಮತ್ತು ಕಲಿಕಾ ಟಾಟಾ ಟ್ರಸ್ಟ್ ಸಹಯೋಗದಲ್ಲಿ ನಡೆದ ಉಚಿತ ಅರೋಗ್ಯ ತಪಾಸಣೆ ಶಿಬಿರ ನಡೆಯಿತು.

ಮೊದಲಿಗೆ ಸಸಿಗೆ ನೀರೆರೆಯು ಮೂಲಕ ಕಾರ್ಯಕ್ರಮ ಉದ್ಘಾಟಿಸಿದ ಸೇಡಂ ತಾಲೂಕಾ ಅರೋಗ್ಯ ಅಧಿಕಾರಿ ಡಾ.ಸಂಜೀವ್ ಪಾಟೀಲ್ ಅವರ ಚಾಲನೆ ನೀಡಿ ಮಾತನಾಡುತ್ತ ಗ್ರಾಮದ ಜನರು ಆರೋಗ್ಯದ ಕಡೆ ಗಮನ ಕೊಡಬೇಕು. ಸುತ್ತಮುತ್ತಲಿನ ಪರಿಸರ ಮಾಲಿನ್ಯ ಆಗದಂತೆ ನೋಡಿಕೊಳ್ಳಬೇಕು. ಆರೋಗ್ಯದ ಶುಚಿತ್ವದ ಕಡೆ ಲಕ್ಷವಹಿಸಬೇಕು ಅಂದಾಗ ಮಾತ್ರ ಅರೋಗ್ಯವಂತ ಜೀವನ ನಡೆಸಲು ಸಾಧ್ಯವಾಗುತ್ತದೆ. ತಾಲೂಕು ಮತ್ತು ಜಿಲ್ಲೆಯಿಂದ ಆರೋಗ್ಯ ತಪಾಸಣೆ ಮಾಡಲು ಜಿಲ್ಲಾ ಮಟ್ಟದ ಅಧಿಕಾರಗಳು ಭಾಗವಹಿಸಿದ್ದು ವಿಶೇಷವಾಗಿತ್ತು.

ಜಿಲ್ಲಾ ಆರ್‌ಸಿಹೆಚ್ ಅಧಿಕಾರಿ ಡಾ.ಸಿದ್ದು ಪಾಟೀಲ ಅವರ ಮಾರ್ಗದರ್ಶನದಲ್ಲಿ ನಡೆದ ಶಿಬಿರದಲ್ಲಿ ದಂತ ವೈದ್ಯ ಡಾ.ಮಂಜುನಾಥ್ ಅರಿಕೆರಿ, ಡಾ.ಶ್ವೇತಾ. ಡಿ. ಅವರು ಬಾಯಿಯ ನೈರ್ಮಲ್ಯದ ಕುರಿತು ಮತ್ತು ದಂತ ಫ್ಲೊ???ರೋಸಿಸ್ ಕುರಿತು ಮಾಹಿತಿ ನೀಡಿದರು. ತಂಬಾಕು ನಿಯಂತ್ರಣ ವೈದ್ಯಧಿಕಾರಿ ಡಾ.ರಾಕೇಶ್ವರಿ ಉಪಸ್ಥಿತರಿದ್ದರು.

ನೀಲಹಳ್ಳಿ ಗ್ರಾಮದ ಜನರು,ಮತ್ತು ಶಾಲಾ ಶಿಕ್ಷಕರು, ಶಾಲಾ ಮಕ್ಕಳು ಸೇರಿದಂತೆ ಒಟ್ಟು ಫಲಾನುಭವಿಗಳು 167. ಆರೋಗ್ಯ ತಪಾಸಣೆ ಮಾಡಿಕೊಂಡರು. ಪತ್ತೆಯಾದ ಪ್ರಕರಣಗಳು ದಂತ ಕ್ಷಯ–43,

ಆವರ್ತಕ ಗಾಯಗಳು–32 ದಂತ ಭಾಗ್ಯದ ಅಡಿಯಲ್ಲಿ ಫಲಾನುಭವಿಗಳು–8 ದಂತ ಫ್ಲೊ???ರೋಸಿಸ್–18 ಕ್ಯಾನ್ಸರ್ ಪೂರ್ವ ಗಾಯಗಳು–12 ಪತ್ತೆಯಾದವು. ಬಾಯಿಯ ನೈರ್ಮಲ್ಯ ಸಾಧನಗಳು, ಉಚಿತವಾಗಿ ಟ್ಯೂತ್ ಪೇಸ್ಟ್ / ಬ್ರೆಷ್ ಮೌತ್ ವಾಷ್ ಔಷಧಿಗಳನ್ನು ವಿತರಿಸಲಾಯಿತು. ಆಶಾ ಕಾರ್ಯಕರ್ತರು, ಅಂಗನವಾಡಿ ಶಿಕ್ಷಕಿಯರು, ಅರೋಗ್ಯ ಇಲಾಖೆಯ ಸಿಬ್ಬಂದಿಗಳು ಅರಿವು ಮೂಡಿಸುವದರ ಜೊತೆಗೆ ಉಚಿತ ಚಿಕಿತ್ಸೆ ಕುರಿತು ಗ್ರಾಮದಲ್ಲಿ ಜಾಗೃತಿ ಮೂಡಿಸಿದರು.



# ರಾಷ್ಟ್ರೀಯ ವಿಜ್ಞಾನ ಪ್ರದರ್ಶನ ಸ್ಪರ್ಧೆಗಳಿಗೆ ಅರ್ಹತೆ ಪಡೆದ ಅಪ್ಪಾ ಪಬ್ಲಿಕ್ ಶಾಲೆಯ ವಿದ್ಯಾರ್ಥಿಗಳಾದ ಕು.ಭವಾನಿ ಮತ್ತು ಕು.ಶಿವಾನಿ

ಕಲಬುರಗಿ;ನ.13: ಕಲಬುರಗಿಯ ಅಪ್ಪಾ ಪಬ್ಲಿಕ್ ಶಾಲೆಯ 9ನೇ ತರಗತಿ ವಿದ್ಯಾರ್ಥಿಗಳಾದ ಕು. ಭವಾನಿ ಮತ್ತು ಕು. ಶಿವಾನಿ ನವೆಂಬರ್ 10 ಮತ್ತು 11 ರಂದು, ಬಾಗಲಕೋಟೆಯ ತೇಜಸ್ ಶಾಲೆಯಲ್ಲಿ ಸಿಬಿಎಸ್‌ಸಿ ಶಾಲೆಗಳಿಗಾಗಿ ನಡೆದ ಪ್ರಾದೇಶಿಕ ವಿಜ್ಞಾನ ಪ್ರದರ್ಶನ ಸ್ಪರ್ಧೆಗಳಲ್ಲಿ, ವಿದ್ಯುತ್ ವಾಹನಗಳಿಗೆ ತಮ್ಮ ಪ್ರೋಟೋ ಟೈಪ್ ಮಾದರಿ ವೈರ್‌ಲೆಸ್ ಸೌರಶಕ್ತಿ ಚಾಲಿತ ಚಾಜಿರ್‌ಂಗ್‌ನೊಂದಿಗೆ "ಹಸಿರು ಶಕ್ತಿ" ವಿಭಾಗದಲ್ಲಿ ಪ್ರಥಮ ಸ್ಥಾನ ಪಡೆಯುವ ಮೂಲಕ ಕಲಬುರಗಿ ಜಿಲ್ಲೆ ಮತ್ತು ರಾಜ್ಯಕ್ಕೆ ಪ್ರಶಸ್ತಿಗಳನ್ನು ತಂದಿದ್ದಾರೆ.



ಶರಣಬಸವೇಶ್ವರ ಸಂಸ್ಥಾನದ 8ನೇ ಮಹಾದಾಸೋಹ ಪೀಠಾಧಿಪತಿ ಲಿಂಗೈಕ್ಯ ಪೂಜ್ಯ ಡಾ. ಶರಣಬಸವಪ್ಪ ಅಪ್ಪಾಜಿ ಮತ್ತು ಶರಣಬಸವ ವಿಶ್ವವಿದ್ಯಾಲಯದ ಕುಲಾಧಿಪತಿಗಳಾದ ಮಾತೋಶ್ರೀ ಪೂಜ್ಯ ಡಾ.ದಾಕ್ಷಾಯಿಣಿ ಅವ್ವಾಜಿ ಅವರ ಅವಳಿ ಪುತ್ರಿಯರಾದ ಕು. ಭವಾನಿ ಮತ್ತು ಕು. ಶಿವಾನಿ ಅವರು ಶೀಘ್ರದಲ್ಲೇ ನವದೆಹಲಿಯಲ್ಲಿ ನಡೆಯಲಿರುವ ರಾಷ್ಟ್ರೀಯ ಮಟ್ಟದ ವಿಜ್ಞಾನ ಪ್ರದರ್ಶನ ಸ್ಪರ್ಧೆಗಳಿಗೆ ಅರ್ಹತೆ ಪಡೆದಿದ್ದಾರೆ.ಅಪ್ಪಾ ಪಬ್ಲಿಕ್ ಶಾಲೆಯ ಈ ಜೋಡಿ ರಾಜ್ಯದ 34 ಶಾಲೆಗಳ 61 ತಂಡಗಳ ತೀವ್ರ ಸ್ಪರ್ಧೆಯನ್ನು ಎದುರಿಸಿ, ಪರಿಣಿತ ನ್ಯಾಯಾಧೀಶರ ತಂಡಕ್ಕೆ ನಿರರ್ಗಳ ಇಂಗ್ಲಿಷ್‌ನಲ್ಲಿ ಪರಿಣಾಮಕಾರಿ ಪ್ರಸ್ತುತಿ ನೀಡುವ ಮೂಲಕ ಅತ್ಯುತ್ತಮರಾಗಿ ಹೊರಹೊಮ್ಮಿದರು. ಚಾಜಿರ್‌ಂಗ್ ಸ್ಟೇಷನ್‌ಗಳಲ್ಲಿ ವಿದ್ಯುತ್ ಬಳಸಿ ಸಾಂಪ್ರದಾಯಿಕ ಚಾಜಿರ್‌ಂ???ಗೆ ಹೋಲಿಸಿದರೆ ಇದು ಸಮಯವನ್ನು ಉಳಿಸುವುದಲ್ಲದೆ ಅದರ ವೆಚ್ಚ ಪರಿಣಾಮಕಾರಿಯೂ ಆಗಿರುತ್ತದೆ.

ಕು. ಭವಾನಿ ಮತ್ತು ಕು. ಶಿವಾನಿ ಸಿದ್ಧಪಡಿಸಿದ ಪ್ರೋಟೋ ಮಾದರಿಯನ್ನು ವಿದ್ಯುತ್ ವಾಹನಗಳು ಹೆಚ್ಚಿನ ಶಕ್ತಿಯ ಬ್ಯಾಟರಿಗಳನ್ನು ಹೊಂದಿದ್ದರೆ, ಅವುಗಳನ್ನು ಚಾರ್ಜ್ ಮಾಡುವ ಸಮಯದ ಅವಧಿಯನ್ನು ಗಣನೀಯವಾಗಿ ಕಡಿಮೆ ಮಾಡಲು ವಿನ್ಯಾಸಗೊಳಿಸಲಾಗಿದೆ. ಮೂಲತಃ ಮಾದರಿಯನ್ನು ವಿದ್ಯುತ್ ಚಾಲಿತ ವಾಹನಗಳು ಮತ್ತು ಚಾಜಿರ್‌ಂಗ್ ಸ್ಟೇಷನ್‌ಗಳಲ್ಲಿ ಕ್ವಾಯಿ???ಗಳನ್ನು ಇರಿಸುವ ಮೂಲಕ ವಿದ್ಯುತ್‌ಚಾಲಿತ ವಾಹನಗಳನ್ನು ಚಾರ್ಜ್ ಮಾಡಲು ಎಲೆಕ್ಟ್ರೋ ಮ್ಯಾಗ್ನೆಟಿಕ್ ಫೀಲ್ಡ್ ಎಫೆಕ್ಟ್ ಅನುಸರಿಸಿ ಕಾನ್ಫಿಗರ್ ಮಾಡಲಾಗಿದೆ. ಸೌಲಭ್ಯವನ್ನು ಬಳಸಿಕೊಂಡು ಅಧಿಕೃತ ವಾಹನಗಳನ್ನು ಮಾತ್ರ ಚಾರ್ಜ್ ಮಾಡಲಾಗಿದೆಯೆ ಎಂದು ಖಚಿತಪಡಿಸಿಕೊಳ್ಳಲು ಚಾಜಿರ್‌ಂಗ್ ಸ್ಟೇಷನ್‌ನೊಂದಿಗೆ ವಾಹನಗಳ ದೃಢೀಕರಣಕ್ಕಾಗಿ RFID ತಂತ್ರಜ್ಞಾನವನ್ನು ಸಹ ಬಳಸಲಾಗುತ್ತದೆ.ಕು. ಭವಾನಿ ಮತ್ತು ಕು. ಶಿವಾನಿ ಅವರ ಪ್ರಕಾರ, ಇವಿ ವಾಹನಗಳ ಚಾಜಿರ್‌ಂಗ್ ಕಷ್ಟಕರವಲ್ಲ, ಚಾಲಕರು ತಮ್ಮ ವಾಹನಗಳನ್ನು ಸಂಪೂರ್ಣವಾಗಿ ಚಾರ್ಜ್ ಮಾಡಲು ಗಂಟೆಗಟ್ಟಲೆ ಕಾಯುತ್ತಾರೆ ಮತ್ತು ಬಳಸಿದ ವಿದ್ಯುತ್‌ಗೆ ಅತಿಯಾದ ವೆಚ್ಚವನ್ನು ಪಾವತಿಸುತ್ತಾರೆ. ಆದಾಗ್ಯೂ, ಈ ಇಬ್ಬರು ವಿದ್ಯಾರ್ಥಿಗಳು ಬಳಸಿದ ತಂತ್ರಜ್ಞಾನವು ವಾಹನವನ್ನು ಚಾರ್ಜ್ ಮಾಡಲು ಸೌರಶಕ್ತಿಯನ್ನು ಬಳಸುವುದರಿಂದ ವೆಚ್ಚ ಪರಿಣಾಮಕಾರಿಯಾಗಿರುತ್ತದೆ,

# ವೀರವನಿತೆಯಾಗಿ ನಮ್ಮದೇಶದ ಶತೃಗಳನ್ನು ಸದೆ ಬಡಿದ ಮಹಾನ ತಾಯಿ:ಶಾಸಕ ಅಲ್ಲಮ್‌ಪ್ರಭು ಪಾಟೀಲ

ಕಲಬುರಗಿ:ನ,13:18 ನೇ ಶತಮಾನದಲ್ಲಿ ಚಿತ್ರದುರ್ಗದ ವೀರಯೋಧಿಯಾಗಿದ್ದ ಒನಕೆ ಓಬವ್ವ ವೀರವನಿತೆಯಾಗಿ ನಮ್ಮ ದೇಶದ ಶತ್ರುಗಳನ್ನು ಸದೆ ಬಡಿದ ಮಹಾನ ತಾಯಿ ಇವರು ಎಂದು ಕಲಬುರಗಿ ದಕ್ಷಣ ಮತ ಕ್ಷೇತ್ರದ ಶಾಸಕರಾದ ಅಲ್ಲಮಪ್ರಭು ಪಾಟೀಲ್ ಅವರು ಹೇಳಿದರು.ಮಂಗಳವಾರ ಡಾ. ಎಸ್.ಪಂಡಿತ ರಂಗಮಂದಿರದಲ್ಲಿ ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮಹಾನಗರ ಪಾಲಿಕೆ ಹಾಗೂ ಜಿಲ್ಲಾ ಪಂಚಾಯತ್ ಇವರುಗಳ ಸಂಯುಕ್ತಾಶ್ರಯದಲ್ಲಿ ನಗರದ ವೀರವನಿತೆ ಒನಕೆ ಓಬವ್ವ ಜಯಂತ್ಯುತ್ಸವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ತನ್ನ ಒನಕೆಯನ್ನು ಅಸ್ತ್ರವನ್ನಾಗಿ ಮಾಡಿಕೊಂಡು ದೇಶದ ಶತ್ರು ಆದ ಹೈದಾರಾಲಿಯ ಸೈನ್ಯವನ್ನು ಸದೆ ಬಡೆದು ನಾಶ ಮಾಡಿ ಹೆಣ್ಣು ಕುಲದ ಗೌರವವನ್ನು ಎತ್ತಿ ಹಿಡಿದ ಮಹಾತಾಯಿ ಇವರು, ಆಗಿನ ಕಾಲದಲ್ಲಿ ಹೆಣ್ಣು ಮಕ್ಕಳಿಗೆ ಯಾವುದೆ ಸ್ಥಾನ ಇರಲಿಲ್ಲ.ಅಂತಹ ಸಮಯದಲ್ಲಿ ಅವರು ಮಾಡಿದ ಧೈರ್ಯ ಸಾಹಾಸವನ್ನು ನಾವು ಮೆಚ್ಚಲೆಬೇಕು ಎಂದರು.

ಸಮಾಜದಲ್ಲಿ ಪ್ರತಿಯೊಂದು ಮನೆಯಲ್ಲಿ ಹೆಣ್ಣು ಮಗಳು ಅವರ ಹಾಗೆ ಹುಟ್ಟಿ ಬೆಳೆಯಬೇಕು ಬರಿ ಟಿವಿ ಧಾರಾವಾಹಿಗಳನ್ನು ನೋಡುತ್ತಾ ಕುಳಿತರೆ ಹೇಗೆ ಇತಿಹಾಸದ ಬಗ್ಗೆ ಹೆಣ್ಣು ಮಕ್ಕಳಿಗೆ ಗಮನ ವಿರಲಿ ಎಂದು ಹೇಳಿದರು.ಯಾರು ಇತಿಹಾಸ ಬಲ್ಲವರು ಅವರೇ ಇತಿಹಾಸ ಸೃಷ್ಟಿ ಮಾಡುವವರು ಎಂದು ಡಾ. ಬಾಬ ಸಾಹೇಬ ಅಂಬೇಡ್ಕರ ಅವರು ಹೇಳಿದ್ದಾರೆ. ಹಿಂದಿನ ಕಾಲದಲ್ಲಿ ಹೆಣ್ಣು ಮಕ್ಕಳಿಗೆ ಹೆಚ್ಚು ಸ್ಥಾನಮಾನ ಇರಲಿಲ್ಲ.ಇಂದಿನ ಯುಗದಲ್ಲಿ ಹೆಣ್ಣು ಹೆಚ್ಚಿನ ಸ್ಥಾನಮಾನ ಹೊಂದಿದ್ದಾರೆ. ಎಂದರು.

ನಾವು ಚಿಕ್ಕವರಿಂದ್ದಾಗ ವೀರವನಿತೆ ಒನಕೆ ಒಬ್ಬವ ಕಥೆಗಳು ಪಠ್ಯಪುಸ್ತಕಗಳನ್ನು ಓದುತ್ತಿದ್ದೇವೆ ವೀರವನಿತೆ ಓನಕೆ ಓಬ್ಬವ ಕಥೆಗಳು ಇಂದಿನ ಪೀಳಿಗೆಗಳಿಗೆ ಪರಿಚಯಸಬೇಕೆಂದರು.

ಎ.ಐ.ಸಿ.ಸಿ. ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಜೀಯವರು , ಮಾಜಿ ಮುಖ್ಯಮಂತ್ರಿಗಳಾ ಧರ್ಮಸಿಂಗ್ ಅವರ ಪ್ರಯತ್ನದಿಂದ ಈ ಭಾಗಕ್ಕೆ 371 (ಜೆ) ತಂದು ಅನೇಕ ಸೌಲಭ್ಯಗಳನ್ನು ಪಡೆದುಕೊಂಡಿವೆ ಎಂದರು.

ಸರಕಾರಿ ಕಾಲೇಜು ಇತಿಹಾಸ ವಿಭಾಗದ ಮುಖ್ಯಸ್ಥರಾದ ವಿಜಯಕುಮಾರ ಎಚ್. ಸಾಲಿಮನಿ ವಿಶೇಷ ಉಪನ್ಯಾಸ ನೀಡಿ ಮಾತನಾಡಿ,ಹುಟ್ಟು ಅಸಾಧರಣವಾದರು ಸಾವು ಮಾತ್ರ ಚರಿತ್ರೆಯಾಗಬೇಕು, ಸಾಮಾನ್ಯ ಗೃಹಿಣಿ ಎನಿಸಿಕೊಂಡಿದ್ದ ಒನಕೆ ಓಬವ್ವ ಚಿತ್ರದುರ್ಗದ ಕೋಟೆಯ ವಶಕ್ಕೆ ಯತ್ನಿಸಿದ ಹೈದರಾಲಿಯ ಕುಂತಂತ್ರವನ್ನು ವಿಫಲಗೊಳಿಸಿ ಕೋಟೆ ಮತ್ತು ಜನತೆಯನ್ನು ಅಪಾಯದಿಂದ ಪಾರು ಮಾಡಿದ ವೀರವನಿತೆ ಓಬವ್ವ ಎಂದು ಹೆಸರುವಾಸಿಯಾಗಿದ್ದಾರೆ ಎಂದು ಅವರು ಹೇಳಿದರು.

ಒನಕೆ ಓಬವ್ವ ಕಿತ್ತುರಾಣಿ ಚನಮ್ಮ ಹಾಗೂ ಜಾನ್ಸಿರಾಣಿ ಲಕ್ಷೀಬಾಯಿಯ ಹಾಗೆ ರಾಣಿಯ ವಂಶದಲ್ಲಿ ಜನಿಸಿರಲಿಲ್ಲ ಓಬವ್ವ ಒಂದು ಸಣ್ಣ ಮನೆತನದಲ್ಲಿ ಜನಿಸಿ ಇಡಿ ದೇಶವನ್ನೆ ಹೆಮ್ಮೆಪಡುವಂತಹ ಸಾಧನೆಯನ್ನು ಮಾಡಿದ್ದಾರೆ ಎಂದರು,









# ಅಂಬೇಡ್ಕರ್ ಸ್ಪರ್ಶ ಭೂಮಿ ವಾಡಿ ರೈಲ್ವೆ ನಿಲ್ದಾಣಕ್ಕೆ ಅಂಬೇಡ್ಕರ ನಾಮಕರಣ ಮಾಡುವಂತೆ ಮನವಿ



ವಾಡಿ:ನ.13:ಪಟ್ಟಣದ ರೈಲು ನಿಲ್ದಾಣಕ್ಕೆ ಡಾ. ಬಿ. ಆರ್. ಅಂಬೇಡ್ಕರ ಅವರ ಹೆಸರಿಡಬೇಕು ಎಂದು ವಾಡಿ ಟೌನ್ ಡೆವಲಪ್ಮೆಂಟ್ ಆಂಡ್ ಸಿಟಿಜನ್ ವೆಲ್ಫೇರ್ ಕಮೀಟಿ ಸದಸ್ಯರು ಮಧ್ಯ ರೈಲ್ವೆ ಜನರಲ್ ಮ್ಯಾನೇಜರ್ ವಿಜಯ ಕುಮಾರ ಅವರಿಗೆ ಮನವಿ ಪತ್ರ ಸಲ್ಲಿಸಿದೆ.

ಗುರುವಾರ ಪಟ್ಟಣದ ರೈಲು ನಿಲ್ದಾಣ ಪರಿವಿಕ್ಷಣೆಗೆ ಆಗಮಿಸಿದ ಮಧ್ಯ ರೈಲ್ವೆ ಮುಂಬೈಯ ಜಿ.ಎಂ ಅವರಿಗೆ ವಿವಿಧ ಬೇಡಿಕೆಗಳಿಗಾಗಿ ಮನವಿ ಮಾಡಿದರು.1954ರಲ್ಲಿ ಡಾ. ಅಂಬೇಡ್ಕರ್ ಅವರು ಮುಂಬೈ ಯಿಂದ ಮದ್ರಾಸ್ ಗೆ ಹೋಗುವಾಗ ಎರಡು ಬಾರಿ ವಾಡಿ ರೈಲು ನಿಲ್ದಾಣಕ್ಕೆದಲ್ಲಿ ಇಳಿದು ಪಟ್ಟಣದ ಹಿರಿಯರೊಂದಿಗೆ ಕೆಲಹೊತ್ತು ಮಾತುಕತೆ ಆಡಿದದ್ದರು. ಈ ಐತಿಹಾಸಿಕ ನೇನಪಿಗಾಗಿ ವಾಡಿ ರೈಲು ನಿಲ್ದಾಣಕ್ಕೆ ಡಾ ಅಂಬೇಡ್ಕರ ರೈಲು ನಿಲ್ದಾಣ ಎಂದು ನಾಮಕರಣ ಮಾಡಬೇಕು, ಹಾಗೆ ನೆನೆಗುದಿಗೆ ಬಿದ್ದಿರುವ ಕಲಬುರಗಿ ರೈಲ್ವೆ ಡಿವಿಜನ್ ಶಿಘ್ರವಾಗಿ ಆರಂಭಿಸಬೇಕು ಮಾಡಬೇಕು,

ಕೋವಿಡ್–19 ಸಮಯದಲ್ಲಿ ರದ್ದು ಮಾಡಲಾದ ಗುಂತಕಲ್–ಕಲಬುರಗಿ, ಗುಂತಕಲ್–ವಾಡಿ ರೈಲು ಪುನರಾರಂಭ ಮಾಡಬೇಕು, ಕಲಬುರಗಿ, ಯಾದಗಿರಿ, ರಾಯಚೂರು ಅತಿಹೇಚ್ಚು ಸಂಚಾರ ದಟ್ಟಣೆ ಇರುವುದರಿಂದ ಪ್ರಯಾಣಿಕರು ನಿತ್ಯ ನರಕ ಯಾತನೆ ಅನುಭವಿಸುತ್ತಿದ್ದಾರೆ ಆದ್ದರಿಂದ ಕಲಬುರಗಿ  ಬೆಂಗಳೂರು ಮದ್ಯೆ ಹೊಸ ರೈಲು ಪ್ರಾರಂಭಿಸಬೇಕು, ವಂದೇ ಭಾರತ ರೈಲು ವಾಡಿಯಲ್ಲಿ ನಿಲುಗಡೆ ಮಾಡಬೇಕು,ಪ್ರಯಾಣಿಕರ ಸುರಕ್ಷತೆ ದೃಷ್ಟಿಯಿಂದ ನಿಲ್ದಾಣದಲ್ಲಿ ಸಿಸಿ ಟಿವಿ ಕ್ಯಾಮೆರಾ ಅಳವಡಿಕೆ, ಅಂಗವಿಕಲರು, ಮಹಿಳೆಯರು ಮಕ್ಕಳು ಹಾಗೂ ಅನಾರೋಗ್ಯ ಪೀಡಿತರಿಗಾಗಿ ಪ್ಲಾಟ್ ಫಾರಂ ಹೋಗಲು ಲಿಫ್ಟ್ ಅಳವಡಿಕೆ ಸೇರಿದಂತೆ ವಿವಿಧ ಬೇಡಿಕೆಗಳಿಗಾಗಿ ಸಮೀತಿ ಒತ್ತಾಯಿಸಿತು.ವಾಡಿ ಟೌನ್ ಡೆವಲ ಪ್ಮೆಂಟ್ ಆಂಡ್ ಸಿಟಿಜನ್ ವೆಲ್ಫೇರ್ ಕಮೀಟಿ ಅಧ್ಯಕ್ಷ ಅಮೃತ ಕೋಮಟೆ, ಕಾಯರ್ದರ್ಶಿ ಶೇಖ್ ಅಲ್ತಾಫ್ ಹುಸ್ಯೆನ್ ಸೌಧಾಗರ, ಉಪಾ ಧ್ಯಕ್ಷ ನಾಗೇಂದ್ರ ಜೈಗಂಗಾ, ಬಸವರಾಜ ಕೇಶವರ,ಸುನಿಲ ಗುತ್ತಿಗೆದಾರ, ಸುನಿಲ ವರ್ಮಾ, ರಾಹುಲ ಮೇನಗಾರ ಸೇರಿದಂತೆ ಅನೇಕರು ಉಪಸ್ಥಿತರಿದ್ದರು

# ಗ್ಯಾರಂಟಿಗಳ ಜೊತೆಗೆ ಕ್ಷೇತ್ರಗಳ ಅಭಿವೃದ್ಧಿಗೆ ನಮ್ಮ ಸರ್ಕಾರ ಬದ್ಧ:ಸಚಿವ ಡಾ.ಶರಣಪ್ರಕಾಶ್ ಪಾಟೀಲ್

ಸೇಡಂ,ನ,13: ಗ್ಯಾರಂಟಿಗಳಿಂದ ರಾಜ್ಯದಲ್ಲಿ ಅಭಿವೃದ್ಧಿ ಕಾರ್ಯಗಳು ಕುಂಠಿತವಾಗುತ್ತಿವೆ ಎಂದು ವಿರೋಧ ಪಕ್ಷದ ನಾಯಕರು ದಿನನಿತ್ಯ ಹೇಳುತ್ತಿದ್ದಾರೆ ಅವರು ಬಂದು ನಮ್ಮ ಕ್ಷೇತ್ರದ ಅಭಿವೃದ್ಧಿ ಕಾರ್ಯಗಳು ಬಂದು ವೀಕ್ಷಿಸಲಿ ಜೊತೆಗೆ ರಾಜ್ಯದಲ್ಲಿ ಅಭಿವೃದ್ಧಿ ಕಾರ್ಯಾಗಳು ಕುಂಠಿತವಾಗಿಲ ಎಂದು ವೈದ್ಯಕೀಯ ಶಿಕ್ಷಣ ಸಚಿವರಾದ ಡಾ. ಶರಣಪ್ರಕಾಶ್ ಪಾಟೀಲ್ ಊಡಗಿ ಹೇಳಿದರು. ಪಟ್ಟಣದ ಸರ್ವೇ ನಂಬರ್ 705 ಆಶ್ರಯ ಕಾಲೋನಿಯಲ್ಲಿ ನಗರಾಭಿವೃದ್ಧಿ ಇಲಾಖೆ, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಹಾಗೂ ಪುರಸಭೆ ಸಂಯುಕ್ತಾಶ್ರಯದಲ್ಲಿ ಕೇಂದ್ರ ಪುರಸ್ಕೃತ ಅಮೃತ್ 2.0 ಯೋಜನೆಯಡಿಯಲ್ಲಿ ಸೇಡಂ ಪಟ್ಟಣಕ್ಕೆ ಕಾಚೂರ್ ಬ್ಯಾರೇಜ್ ಮೂಲದಿಂದ ನೀರು ಸರಬರಾಜು ಯೋಜನೆಯ 47.85 ಕೋಟಿ ವೆಚ್ಚದ ಕಾಮಗಾರಿಗೆ ಚಾಲನೆ ನೀಡಿ ಮಾತನಾಡಿದ ಅವರು ಬೇಸಿಗೆ ಸಂದರ್ಭದಲ್ಲಿ ಪಟ್ಟಣಕ್ಕೆ ನಿತ್ಯ ನೀರನ ಕೊರತೆಯನ್ನು ಶಾಶ್ವತವಾಗಿ ನೀಗಿಸಲು ಈ ಯೋಜನೆಯಿಂದ ನೀರಿನ ಅಭಾವಕ್ಕೆ ಕೊನೆಗೊಳ್ಳಲಿದೆ ಎಂದರು.ಈ ವೇಳೆಯಲ್ಲಿ ತೋಟಗಾರಿಕೆಯ ಮಹಾಮಂಡಳಿಯ ಮಾಜಿ ರಾಜ್ಯಾಧ್ಯಕ್ಷರಾದ ಬಸವರಾಜ ಪಾಟೀಲ್ ಊಡಗಿ, ಪುರಸಭೆ ಅಧ್ಯಕ್ಷರಾದ ವಿರೇಂದ್ರ ಪಾಟೀಲ್, ಪುರಸಭೆ ಉಪಾಧ್ಯಕ್ಷ ಶ್ರೀಮತಿ ಸೈಜಾದಬಿ ಇಬ್ರಾಹಿಂ ನಾಡೇಪಲ್ಲಿ,ಸಹಾಯಕ ಆಯುಕ್ತ ಪ್ರಭುರೆಡ್ಡಿ, ತಹಶೀಲ್ದಾರ್ ಶ್ರೀಯಾಂಕಾ ಧನಶ್ರೀ, ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷ ವಿಶ್ವನಾಥ ಪಾಟೀಲ, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ತಾಲೂಕು ಅಧ್ಯಕ್ಷ ಶಿವಶರಣರೆಡ್ಡಿ ಪಾಟೀಲ,ಪುರಸಭೆ ಮುಖ್ಯಾಧಿಕಾರಿ ಮನೋಜಕುಮಾರ ಗುರಿಕಾರ, ಗುರುನಾಥ್ ರೆಡ್ಡಿ, ಕಾಂಗ್ರೆಸ್ ಯುವ ಘಟಕದ ಅಧ್ಯಕ್ಷರಾದ ಭೀಮಾಶಂಕರ ಕೊಳ್ಳಿ,ಯುವ ಕಾಂಗ್ರೆಸ್ ಉಪಾಧ್ಯಕ್ಷ ಅಬ್ದುಲ್ ಸತ್ತರ ನಾಡೇಪಲ್ಲಿ, ಸತೀಶ್ ಪೂಜಾರ,

ವಸಂತಕುಮಾರ್ ಪೂಜಾರಿ, ಮಾರುತಿ ಕೊಡಂಗಲ್ಕರ್, ಎಇಇ ರಾಮಚಂದ್ರ, ಎಇ ಸಂಜೀವ ತೀರಮಲ, ಗುತ್ತಿಗೆದಾರರಾದ ಪ್ರಜ್ವಲ್ ಅಮೃತ್ ನಳಂದ, ಖಾಸಿಂ, ಗ್ವಾಲೇಶ ಹೊನ್ನಳ್ಳಿ,ಪುರಸಭೆ ಸದಸ್ಯರಾದ ಅತೀಯಾ ಬೇಗಂ, ಈರಣ್ಣ ರೇಮಣಿ, ಸತೀಶ್ ದುದನಿ, ಸೇರಿದಂತೆ ಕಾಂಗ್ರೆಸ್ ಪಕ್ಷದ ಮುಖಂಡರು ಕಾರ್ಯಕರ್ತರು ಇದ್ದರು.



# ಒನಕೆ ಓಬವ್ವ ನಾರಿ ಶಕ್ತಿಯ ಸಂಕೇತ: ಡಾ.ಬಂಧು ಸಿದ್ದೇಶ್ವರ



ಕಲಬುರಗಿ:ನ.13:ಭಾರತ ಸ್ವಾತಂತ್ರ್ಯ ಹೋರಾಟದಲ್ಲಿ ಅನೇಕ ವೀರ ಮಹಿಳೆಯರ ತ್ಯಾಗ ಬಲಿದಾನ, ವೀರವೇಶ ಸಾಹಸ ಕಾರ್ಯ ಮತ್ತು ವಿವಿಧ ಕ್ಷೇತ್ರದಲ್ಲಿ ಸಾಧನೆಗೈದವರು ಜೊತೆಗೆ ಚಿತ್ರ ದುರ್ಗ ಕೋಟೇಯ ಸಂರಕ್ಷಣೆಯ, ಹೈದರ್ ಅಲಿ ಸೈನಿಕರ ವಿರುದ್ಧ ತನ್ನ ಆತ್ಮ ಭಲದಿಂದ ಒನಕೆಯಿಂದ ಸಂಹರಿಸಿದ ಓಬವ್ವ ಸ್ತ್ರೀ ಕುಲಕೋಟೆಯ ನಾರಿ ಶಕ್ತಿಯ ಸಂಕೇತವಾಗಿದಾರೆಂದು ಡಾ.ಕೆ.ಎಸ.ಬಂಧು. ಸಿದ್ದೇಶ್ವರ ರವರರು ವಿದ್ಯಾರ್ಥಿಗಳಿಗೆ ಕರೆನೀಡಿದರು.


ಅವರು ದೇವಿಂದ್ರಪ್ಪ ಜಿಸಿ ಸಂಗೀತ ಸಾಹಿತ್ಯ ಕಲಾ ಸಂಸ್ಥೆ ಹಾಗೂ ಪ್ರಿಯದರ್ಶಿನಿ ಕನ್ಯಾ ಪ್ರೌಢಶಾಲೆ ಸಂಯುಕ್ತಾಶ್ರದಲ್ಲಿ ವೀರ ವನಿತೆ ಒಬ್ಬವನ ಜಯಂತಿ ಕಾರ್ಯಕ್ರಮವನ್ನು ಕೆಪಿಈಎಸ್ ಶಾಲೆಯಲ್ಲಿ ಆಯೋಜಿಸಿದ್ದ ಕಾಯರ್ಕ್ರಮದ ಉದ್ಘಾಟಕರಾಗಿ ಹಿರಿಯ ಸಾಹಿತಿ ಡಾ. ಕೆ ಎಸ್.ಬಂಧು.ಸಿದ್ದೇಶ್ವರ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು ಮುಖ್ಯ ಅತಿಥಿಗಳಾಗಿ ಡಾ .ಸುನಿಲಕುಮಾರ್ ಎಚ್ ವಂಟಿ ನ್ಯಾಯವಾದಿಗಳು ಹಾಗೂ ಪ್ರಗತಿಪರ ಚಿಂತಕರು . ಒನಕೆ ಓಬವ್ವ  ಧೈರ್ಯ, ನಿಷ್ಠೆ ಮತ್ತು ಹೆಣ್ಣಿನ ಶೌರ್ಯದ ಪ್ರತೀಕ ಒನಕೆ ಓಬವ್ವ ಕನ್ನಡನಾಡಿನ ಇತಿಹಾಸದಲ್ಲಿ ಶೌರ್ಯ ಮತ್ತು ಧೈರ್ಯದ ಪ್ರತೀಕವಾಗಿದ್ದಾರೆ. ಅವರು ತುಮಕೂರು ಜಿಲ್ಲೆಯ ಚಿತ್ತದುರ್ಗ ಕೋಟೆಯ ಕಾಲದವರು. ಅವರು ದಲಿತ ಜನಸಮುದಾಯದವರಾಗಿದ್ದರೂ, ಅವರು ತೋರಿದ ಸಾಹಸ, ನಿಷ್ಠೆ ಮತ್ತು ದೇಶಭಕ್ತಿಯು ಜಾತಿ ಧರ್ಮಗಳ ಮೀರಿದ ಮಾನವೀಯ ಮೌಲ್ಯಗಳ ಪಾಠವಾಗಿದೆ. ಮದಕೇರಿ ನಾಯಕರ ಕಾಲದಲ್ಲಿ ಚಿತ್ರದುರ್ಗ ಕೋಟೆಯನ್ನು ಹೈದರ್ ಅಲಿ ಅವರ ಸೇನೆ ಆಕ್ರಮಿಸಲು ಬಂದಾಗ, ಕೋಟೆಯ ಒಂದು ರಹಸ್ಯ ಬಾಗಿಲು (ಒನಕೆ ಕುಳಿಯ ದಾರಿ) ಮೂಲಕ ಸೈನಿಕರು ಒಳನುಗ್ಗುತ್ತಿದ್ದಾಗ, ಒಬವ್ವ ಒನಕೆಯಿಂದ ಅವರನ್ನು ಹೊಡೆದು ಹತಮಾಡಿದ ಧೈರ್ಯವಂತಿಕೆ ತೋರಿದರು. ಆ ಸಮಯದಲ್ಲಿ ಅವರ ಪತಿ ಸೇನೆಯ ಕರ್ತವ್ಯದಲ್ಲಿದ್ದರೂ, ಒಬವ್ವ ಕಾದಾಡಿದ ಶೌರ್ಯವು ಕೋಟೆಯ ರಕ್ಷಣೆಗಾಗಿ ಪ್ರೇರಣೆಯಾಯಿತು. ಇಂದಿನ ಕಾಲದಲ್ಲಿ ಒಬವ್ವ ಅವರ ಧೈರ್ಯವು ಹೆಣ್ಣುಮಕ್ಕಳಿಗೆ ಪ್ರೇರಣೆಯಾದ ಮಾರ್ಗದೀಪವಾಗಿದೆ. ಅವರು ಹೆಣ್ಣಿನ ಶಕ್ತಿಯು ಕೇವಲ ಮನೆಯಲ್ಲಷ್ಟೇ ಅಲ್ಲ, ದೇಶರಕ್ಷಣೆಯಲ್ಲಿಯೂ ಅಗತ್ಯವೆಂಬ ಸಂದೇಶ ನೀಡಿದರು. ಸರ್ಕಾರವು ಅವರ ಸ್ಮರಣಾರ್ಥವಾಗಿ "ಒಬವ್ವ ಪಡೆ" ಎಂದು ಕರೆಯಲ್ಪಡುವ ಮಹಿಳಾ ಪೊಲೀಸ್ ಪಡೆ ರಚಿಸಿದೆ. ಸಮಾಜದಲ್ಲಿನ ಹೆಣ್ಣುಮಕ್ಕಳ ಮೇಲಿನ ಹಿಂಸೆ, ಶೋಷಣೆ, ಮತ್ತು ಅನ್ಯಾಯಗಳ ತಡೆ ಉದ್ದೇಶವಾಗಿದೆ ಎಂದರು.

# ಕೊಳಗೇರಿ ಮಂಡಳಿಯ 1000 ಮನೆಗಳು ಶೀಘ್ರದಲ್ಲಿ ಫಲಾನುಭವಿಗಳಿಗೆ ಹಸ್ತಾಂತರ ಮಾಡುವಂತೆ ಆಗ್ರಹ

ಚಿತಾಪುರ;ನ.13:ಪಟ್ಟಣದ ನಾಗಾವಿ ದೇವಸ್ಥಾನದ ಹತ್ತಿರ ನಿರ್ಮಾಣಗೊಂಡಿರುವ 1000 ಮನೆಗಳನ್ನು ಬರುವ ಡಿಸೆಂಬರ್ 30 ರೊಳಗೆ ಫಲಾನುಭವಿಗಳಿಗೆ ಹಸ್ತಾಂತರ ಮಾಡಬೇಕು ಎಂದು ಕರ್ನಾಟಕ ಕೊಳಗೇರಿ ಅಭಿವೃದ್ಧಿ ಹೋರಾಟ ಸಮಿತಿಯ ಪದಾಧಿಕಾರಿಗಳು ಆಗ್ರಹಿಸಿದ್ದಾರೆ.ಈ ಕುರಿತು ಕಲಬುರಗಿ ನಗರದಲ್ಲಿ ಇರುವ ರಾಜ್ಯಸಭೆಯ ವಿರೋಧ ಪಕ್ಷದ ನಾಯಕರು ಹಾಗೂ ಎಐಸಿಸಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆ ಹಾಗೂ ಲೋಕಸಭೆ ಸದಸ್ಯ ರಾಧಾಕೃಷ್ಣ ದೊಡ್ಡಮನಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಕಲಬುರಗಿ ಆಪ್ತ ಸಹಾಯಕರಿಗೆ, ಪ್ರಾದೇಶಿಕ ಆಯುಕ್ತರಿಗೆ, ಜಿಲ್ಲಾಧಿಕಾರಿಗಳಿಗೆ ಹಾಗೂ ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರಿಗೆ ಭೇಟಿ ಮಾಡಿ ಮನವಿ ಪತ್ರ ಸಲ್ಲಿಸಿದ್ದಾರೆ.ಹೋರಾಟ ಸಮಿತಿಯ ಅಧ್ಯಕ್ಷ ಲಕ್ಷ್ಮಿಕಾಂತ್ ಬೋವಿ ತಾಂಡೂರಕರ್ ಮಾತನಾಡಿ, ಪಟ್ಟಣದ ನಾಗಾವಿ ಹತ್ತಿರ ನಿರ್ಮಾಣವಾಗಿರುವ ಮನೆಗಳಿಗೆ ಮೂಲಭೂತ ಸೌಲಭ್ಯ ಒದಗಿಸಿ, ಫಲಾನುಭವಿಗೆ ಮನೆಗಳು ಶೀಘ್ರ ಹಸ್ತಾಂತರ ಮಾಡಬೇಕು ಎಂದು ಆಗ್ರಹಿಸಿದರು.

2018 ರಲ್ಲಿ ಪ್ರಿಯಾಂಕ್ ಖರ್ಗೆ ಸಮಾಜ ಕಲ್ಯಾಣ ಸಚಿವರಾಗಿದ್ದಾಗ ನಿರ್ಮಾಣವಾದ 1000 ಮನೆಗಳು ಸುಮಾರು 8 ವರ್ಷಗಳಿಂದ ಕಾಮಗಾರಿ ನಡೆಯುತ್ತಿದೆ 2 ಮಾರ್ಚ್ 2024 ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕೊಳಗೇರಿ ಮಂಡಳಿ ಅಧ್ಯಕ್ಷ ಪ್ರಸಾದ್ ಅಬ್ಬಯ್ಯ ಮಂಡಳಿಯ ಅಧಿಕಾರಿಗಳು, ವಿಡಿಯೋ ಕಾನ್ಫರೆನ್ಸ್ ಮುಖಾಂತರ ಮನೆಗಳ ಉದ್ಘಾಟನೆ ಮಾಡಲಾಗಿದೆ 1 ವರ್ಷ 6 ತಿಂಗಳ ನಂತರ ಜಿಲ್ಲಾಧಿಕಾರಿಗಳು, ಕೊಳಗೇರಿ ಮಂಡಳಿಯ ಅಧಿಕಾರಿಗಳು, ಸಹಾಯಕ ಆಯುಕ್ತರು ಸೇಡಂ ತಹಶೀಲ್ದಾರರು ಚಿತ್ತಾಪುರ, ಪುರಸಭೆ ಅಧ್ಯಕ್ಷರು ಮತ್ತು ಸದಸ್ಯರು, ಮುಖ್ಯಾಧಿಕಾರಿಗಳು ಫಲಾನುಭವಿಗಳ ಸಮ್ಮುಖದಲ್ಲಿ ಕಳೆದ ಸೆಪ್ಟೆಂಬರ್ 12 ರಂದು ಮನೆಗಳು ಆನ್ ಲೈನ್ ಮುಖಾಂತರ ಲಾಟರಿ ಮಾಡುವ ಮೂಲಕ ಫಲಾನುಭವಿ ಗಳಿಗೆ ಮನೆಗಳ ಅಂಕಿ ಸಂಖ್ಯೆ ನೀಡಿದ್ದಾರೆ ಫಲಾನುಭವಿಗಳು ವಂತಿಕೆ ಹಣ ಪಾವತಿಸಿದ್ದಾರೆ. ಮಂಡಳಿಯ ಅಧಿಕಾರಿಗಳು ಒಂದು ತಿಂಗಳ ಒಳಗಾಗಿ ಮೂಲ ಹಕ್ಕು ಪತ್ರ ಮನೆಗಳ ಹಸ್ತಾಂತರ ಮಾಡುತ್ತೇವೆ ಎಂದು ಹೇಳಿದ್ದರು. ಈಗ ಎರಡು ತಿಂಗಳಾದರೂ ಮನೆಗಳು ಹಸ್ತಾಂತರ ಮಾಡದೇ ವಿಳಂಬ ನೀತಿ ಅನುಸರಿಸುತ್ತಿದ್ದಾರೆ ಇದರಿಂದ ಫಲಾನುಭವಿಗಳು ತೊಂದರೆ ಅನುಭವಿಸುತ್ತಿದ್ದಾರೆ ಎಂದು ಹೇಳಿದ್ದಾರೆ.

ವಿದ್ಯುತ್ ಮೀಟರ್, ನೀರು, ರಸ್ತೆ ಚರಂಡಿ, ಮೂಲಭೂತ ಸೌಲಭ್ಯಗಳನ್ನು ಒದಗಿಸಿಕೊಟ್ಟು ಹಂಚಿಕೆ ಮಾಡಬೇಕು, ಕಟ್ಟಿದ ಮನೆಗಳು ಬಿರುಕು ಬಿಡುತ್ತಿವೆ, ಕಿಟಕಿಗಳು ಒಡೆದಿವೆ ಬಾಗಿಲು ಮುರಿದಿವೆ, ಅನೈತಿಕ ಚಟುವಟಿಕೆಗಳು ನಡೆಯುತ್ತಿವೆ, ಬಡವರ ಕನಸಿನ ಸೂರು ಮನೆ ಕಟ್ಟಿದರು ವಾಸ ಮಾಡುವುದಕ್ಕೆ ಸಿಗದಿರುವುದು ದುರಂತವೇ ಸರಿ.ಚುನಾವಣೆಯ ಸಂದಭರ್ದಲ್ಲಿ ಹಸ್ತಾಂತರ ಮಾಡುತ್ತೇವೆ ಎಂದು ಹೇಳಿದ್ದಾರೆ, ಚುನಾವಣೆ ಮುಗಿದ ಮೇಲೆ ಸಂಬಂಧ ಪಟ್ಟವರು ಮರೆತು ಬಿಟ್ಟಿದ್ದಾರೆ ಹೀಗೆ ಆದರೆ ಮುಂದೆ ಫಲಾನುಭವಿಗಳಿಂದ ಉಗ್ರ ಹೋರಾಟ ಮಾಡಬೇಕಾಗುತ್ತದೆ.






Owner, Editor, Printerd,and published, :-Owner - sidramayya swamy devi colony bidar - 585401, Editor-sidramayya swamy devi colony bidar, Printed at Sri sai offset printer's H.NO : 8-9-416/1 devi colony bidar - 585401 Published at H.NO:8-9-416/1 devi colony Bidar - 585401